ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

21 ಜುಲೈ, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 130 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಬ್ರಿಟನ್‌ನ ನೂತನ ಪ್ರಧಾನಿಯಾಗಿ ಆ್ಯಂಡಿ ಬರ್ನ್ ಹಮ್ ಅವರು ಸೋಮವಾರ ಅಧಿಕಾರ ಸ್ವೀಕರಿಸಿದರು.


ಕೊಳಕು, ಅಸಹ್ಯಗಳನ್ನು ಮೀರಿ ನಿಲ್ಲುವ ಮಾನವೀಯತೆ » 2


ರಾಮ ಮಂದಿರ ದೇಣಿಗೆ ಲೂಟಿ ಕ್ರಿಮಿನಲ್ ಅಪರಾಧ » 3


ಚನ್ನಮ್ಮ ಅವರಿಗೆ ಗೌಡರ ಕುಟುಂಬದ ವಿದಾಯ » 4

# ಚನ್ನಮ್ಮಗೆ ಭಾವಪೂರ್ಣ ವಿದಾಯ

## ಸಾವಿರಾರು ಜನರ ಅಂತಿಮ ದರ್ಶನ









• ಪ್ರಜೋದಯ ವರದಿ

**ಹೊಳೆನರಸೀಪುರ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮ ಪತ್ನಿ, ಸರಳತೆಯ ಸಾಕಾರ ಮೂರ್ತಿ ಶ್ರೀಮತಿ ಚನ್ನಮ್ಮ ಅವರ ಅಂತ್ಯಕ್ರಿಯೆ ಸಾವಿರಾರು ಜನರ ಅಶ್ರುತರ್ಪಣದ ನಡುವೆ ಸೋಮವಾರ ತಮ್ಮ ಆರಾಧ್ಯ ದೈವ ಮಾವಿನಕೆರೆ ಶ್ರೀ ರಂಗನಾಥ ಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ನೆರವೇರಿತು.**

ರಾಜ್ಯ ಸರ್ಕಾರದ ಪರವಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗೌರವವಂದನೆ ಸಲ್ಲಿಸಿದರು. ಕೇಂದ್ರ ಸರ್ಕಾರದ ಪರವಾಗಿ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ವಿ. ಸೋಮಣ್ಣ, ಶಿವರಾಜ್ ಸಿಂಗ್ ಚೌಹಾಣ್ ಅವರು ಭಾಗವಹಿಸಿ ಅಂತಿಮ ನಮನ ಸಲ್ಲಿಸಿದರು. ದೇವೇಗೌಡರು ಗೌರವವಂದನೆ ಸಲ್ಲಿಸುವ ವೇಳೆ ಪತ್ನಿಯ ಪಾರ್ಥಿವ ಶರೀರದ ಎದುರು ಕಣ್ಣೀರಿಟ್ಟರು.

ಸಚಿವರು, ಸಂಸದರು, ಶಾಸಕರು ಸೇರಿ ಗಣ್ಯರು ಅಂತಿಮ ಪುಷ್ಪನಮನ ಸಲ್ಲಿಸಿದ ಬಳಿಕ 3 ಸುತ್ತು ಕುಶಾಲ ತೋಪು ಸಿಡಿಸಿ, ರಾಷ್ಟ್ರಗೀತೆ ನಮನದೊಂದಿಗೆ ಸರ್ಕಾರಿ ಗೌರವ ವಂದನೆ ಸಲ್ಲಿಸಲಾಯಿತು. 2 ನಿಮಿಷ ಮೌನಾಚರಣೆ ಸಲ್ಲಿಸಿದ ಬಳಿಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೇವೇಗೌಡರಿಗೆ ರಾಷ್ಟ್ರಧ್ವಜ ಹಸ್ತಾಂತರಿಸಿ ಅವರ ಕಾಲಿಗೆ ನಮಸ್ಕರಿಸಿದರು. ಬಳಿಕ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಬಳಿ ತೆರಳಿ ರಾಷ್ಟ್ರ ಧ್ವಜವನ್ನು ನೀಡಿದರು.

ಪುರೋಹಿತರ ತಂಡವು ಅಂತಿಮ ವಿಧಿವಿಧಾನ, ದೇಹ ಶುದ್ಧಿ ಕಾರ್ಯ ಕೈಗೊಂಡ ನಂತರ ದೇವೇಗೌಡರು ಮತ್ತು ಕುಟುಂಬಸ್ಥರಿಂದ ಪಾರ್ಥಿವ ಶರೀರಕ್ಕೆ ಅಂತಿಮ ಪೂಜಾ ಕೈಂಕರ್ಯ ನೇರವೇರಿಸಲಾಯಿತು. ಇದೇ ವೇಳೆ ಅರ್ಚಕರ ತಂಡದಿಂದ ಸ್ತೋತ್ರ ಪಠಣ ಕಾರ್ಯವೂ ನಡೆಯಿತು. ಶ್ರೀ ರಂಗನಾಥ ಸ್ವಾಮಿ, ಶ್ರೀ ನಿಮಿಷಾಂಬ, ಮೈಸೂರಿನ ಚಾಮುಂಡೇಶ್ವರಿ, ಹರದನಹಳ್ಳಿಯ ದೇವೇಶ್ವರ, ಬೆಟ್ಟದ ರಂಗನಾಥ ಸ್ವಾಮಿ ದೇವಸ್ಥಾನದಿಂದ ತಂದಿದ್ದ ಪ್ರಸಾದ ಸಮರ್ಪಿಸಲಾಯಿತು. ನಂತರ ಪುಷ್ಪಾಲಂಕೃತ ಪಲ್ಲಕ್ಕಿಯಲ್ಲಿ ಚನ್ನಮ್ಮ ಅವರ ಪಾರ್ಥಿವ ಶರೀರವಿಟ್ಟು ಮೂರು ಪ್ರದಕ್ಷಣೆ ಹಾಕಲಾಯಿತು. ಈ ವೇಳೆ ಮಕ್ಕಳು, ಮೊಮ್ಮಕ್ಕಳು ಹೆಗಲುಕೊಟ್ಟರು.

ಬಳಿಕ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದ ಸ್ವಾಮೀಜಿ, ಶ್ರೀ ನಂಜಾವಧೂತ ಸ್ವಾಮೀಜಿ, ಶ್ರೀ ಶಂಭುನಾಥ ಸ್ವಾಮೀಜಿ, ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಸೇರಿ ವಿವಿಧ ಮಠಾಧೀಶರ ಸಾನಿಧ್ಯದಲ್ಲಿ ಒಕ್ಕಲಿಗ ಸಂಪ್ರದಾಯದಂತೆ ಕಿರಿಯ ಪುತ್ರ ಹೆಚ್.ಡಿ.ರಮೇಶ್ ಅವರು ಅಂತಿಮ ವಿಧಿವಿಧಾನ ನೆರವೇರಿಸಿದರು.



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರಿಗೆ ರಾಷ್ಟ್ರಧ್ವಜ ಹಸ್ತಾಂತರಿಸಿದರು.

**ಕುಟುಂಬಸ್ಥರ ಭಾವುಕ ವಿದಾಯ**

ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಜನಸಾಗರದ ಮಧ್ಯೆ ಪುತ್ರ ಹೆಚ್.ಡಿ. ಕುಮಾರಸ್ವಾಮಿ ಅವರು ತಾಯಿಯ ಮುಖವನ್ನು ನೋಡಿ ಭಾವುಕರಾಗಿ ಹಣೆಗೆ ಮುತ್ತಿಟ್ಟು, ಪಾದಗಳಿಗೆ ನಮಸ್ಕರಿಸಿ ಅಂತಿಮ ನಮನ ಸಲ್ಲಿಸಿದರು. ಹೆಚ್.ಡಿ.ರೇವಣ್ಣ ಅವರು ಕೂಡ ಹಣೆಗೆ ಮುತ್ತಿಟ್ಟು ಕಣ್ಣೀರಿಟ್ಟರು. ಈ ದೃಶ್ಯ ನೆರೆದಿದ್ದವರ ಕಣ್ಣಂಚಲ್ಲಿ ನೀರು ತರಿಸಿತು. ಪುತ್ರಿಯರಾದ ಅನಸೂಯ ಮಂಜುನಾಥ್, ಶೈಲಜಾ ಚಂದ್ರಶೇಖರ್, ಪುತ್ರರಾದ ಹೆಚ್.ಡಿ. ಬಾಲಕೃಷ್ಣ, ಹೆಚ್.ಡಿ.ರಮೇಶ್, ಮೊಮ್ಮಕ್ಕಳಾದ ನಿಖಿಲ್ ಕುಮಾರಸ್ವಾಮಿ, ಡಾ.ಸೂರಜ್ ರೇವಣ್ಣ ಸೇರಿ ಕುಟುಂಬದ ಸದಸ್ಯರು ಭಾವುಕ ವಿದಾಯ ನೀಡಿದರು.

## ನನಗೆ ಶಕ್ತಿ ತುಂಬಿದ್ದೇ ಪತ್ನಿ

### ಚನ್ನಮ್ಮನ ನೆನೆದು ಗದ್ಗರಿತರಾದ ಗೌಡರು

**ಹೊಳೆನರಸೀಪುರ:** ನನ್ನ ಬೆಳವಣಿಗೆಯ ಪ್ರತಿ ಹಂತದಲ್ಲೂ ಪತ್ನಿ ಚನ್ನಮ್ಮ ನೆರವಾದರು. ಇದನ್ನು ವಿಶ್ಲೇಷಣೆ ಮಾಡುವುದು ಕಷ್ಟ, ಅವರನ್ನು ಸ್ವಾಮಿಯ ಸಾನಿಧ್ಯಕ್ಕೆ ಕಳುಹಿಸಿಕೊಟ್ಟಿದ್ದೇನೆಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಗದ್ಗದಿತರಾದರು.

ಚನ್ನಮ್ಮ ಅವರ ಅಂತ್ಯಸಂಸ್ಕಾರ ವೇಳೆ ಮಾತನಾಡಿದ ಅವರು, ನನಗೆ ಶಕ್ತಿ ತುಂಬಿದ್ದೇ ಪತ್ನಿ. ನನ್ನ ರಾಜಕೀಯ ಬೆಳವಣಿಗೆಗೆ ಶಕ್ತಿಕೊಟ್ಟವನು ರಂಗನಾಥಸ್ವಾಮಿ. ಮತ್ತೊಂದೆಡೆ ಕುಲದೇವರು ದೇವೇಶ್ವರನ ಆಶೀರ್ವಾದ. ನನ್ನ ಬೆಳವಣಿಗೆಗೆ ನಮ್ಮ ಕುಟುಂಬದ ಎಲ್ಲರೂ ಕಾರಣ ಎಂದರು.

ರಂಗನಾಥನ ಸಾನಿಧ್ಯದಲ್ಲಿ ಸಮಾಧಿ ಮಾಡಲು ಮಕ್ಕಳ ನಿರ್ಧಾರ. ನನ್ನ ಸ್ನೇಹಿತರಾದ ಡಾ.ಕೃಷ್ಣ, ಅಳಿಯಂದಿರು ಇದೇ ಸ್ಥಳದಲ್ಲಿ ಅಂತ್ಯಕ್ರಿಯೆ ಮಾಡಬೇಕೆಂದು ತೀರ್ಮಾನ ಮಾಡಿದರು. ಪಡುವಲಹಿಪ್ಪೆಯಲ್ಲಿ ಅಂತ್ಯಕ್ರಿಯೆ ಮಾಡಬೇಕೆನ್ನುವುದು ನನ್ನ ಇಚ್ಛೆಯಾಗಿತ್ತು. ಆದರೆ, ನಮ್ಮ ಮಕ್ಕಳ ತೀರ್ಮಾನದಂತೆ ಇಲ್ಲಿ ಅಂತ್ಯಕ್ರಿಯೆ ಮಾಡಲಾಗುತ್ತಿದೆ. ಈ ಜಮೀನನ್ನು ಕ್ರಯಕ್ಕೆ ಬರೆಸಿಕೊಂಡು ಅಂತ್ಯಕ್ರಿಯೆ ಮಾಡಲಾಗುತ್ತಿದೆ. ಮಳೆ ಬರುತ್ತದೆ ಎಂದುಕೊಂಡಿದ್ದರು. ಆದರೆ, ನಾನು ಎಳ್ಳಷ್ಟು ತೊಂದರೆ ಆಗಲ್ಲ ಎಂದಿದ್ದೆ. ಅದರಂತೆ ಸೂಸೂತ್ರವಾಗಿ ನೆರವೇರಿದೆ ಎಂದು ಹೇಳಿದರು.





## ಅಂತಿಮ ಸಂಸ್ಕಾರಕ್ಕೆ ಸಾಕ್ಷಿಯಾದ ಜನಸ್ತೋಮ

ಮೂರು ದಿನಗಳ ಕಾಲ ಚನ್ನಮ್ಮ ಅವರ ಅಂತಿಮ ದರ್ಶನವನ್ನು ಸಾವಿರಾರು ಸಂಖ್ಯೆಯಲ್ಲಿ ಜನರು ಪಡೆದುಕೊಂಡಿದ್ದರೂ ಅಂತಿಮ ಸಂಸ್ಕಾರ ಸ್ಥಳದಲ್ಲೂ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರ ದಂಡೇ ನೆರದಿತ್ತು. ಅಂತ್ಯಕ್ರಿಯೆ ನಡೆಯುವ ಸ್ಥಳದಲ್ಲಿ 50 ಸಾವಿರಕ್ಕೂ ಹೆಚ್ಚಿನ ಆಸನ ವ್ಯವಸ್ಥೆ, ಪಾರ್ಕಿಂಗ್ ಸೌಕರ್ಯದ ಜೊತೆಗೆ, ಸಾವಿರಾರು ಜನರಿಗೆ ಊಟದ ವ್ಯವಸ್ಥೆ, ತುರ್ತು ವೈದ್ಯಕೀಯ ಸೌಲಭ್ಯವನ್ನು ಸ್ಥಳದಲ್ಲಿ ಕಲ್ಪಿಸಲಾಗಿತ್ತು.

## ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದ ಗಣ್ಯರು



ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಇಂಧನ ಸಚಿವ ಕೆ.ಜೆ ಜಾರ್ಜ್, ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ, ಸಭಾಪತಿ ಬಸವರಾಜ ಹೊರಟ್ಟಿ, ವಿಪಕ್ಷನಾಯಕ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದರಾದ ಡಾ.ಸಿ.ಎನ್.ಮಂಜುನಾಥ್, ಬಿ.ವೈ.ರಾಘವೇಂದ್ರ, ಮಲ್ಲೇಶ ಬಾಬು, ಶ್ರೇಯಸ್ ಪಟೇಲ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಚಲುವರಾಯಸ್ವಾಮಿ, ಗೋವಿಂದ ಕಾರಜೋಳ, ಡಾ.ಸುಧಾಕರ್, ಸುರೇಶ್ ಬಾಬು, ಸಿ.ಎಸ್.ಪುಟ್ಟರಾಜು, ಹೆಚ್.ಆಂಜನೇಯ, ರೋಷನ್ ಬೇಗ್, ಡಿ.ಸಿ.ತಮ್ಮಣ್ಣ, ಕೆ.ಗೋಪಾಲಯ್ಯ, ಎ.ಮಂಜು, ರಾಜೇಗೌಡ, ಹೆಚ್.ಕೆ. ಕುಮಾರಸ್ವಾಮಿ, ಸಾ.ರಾ.ಮಹೇಶ್, ಹೆಚ್.ಪಿ.ಸ್ವರೂಪ್, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ಸಂಮೃದ್ಧಿ ಮಂಜುನಾಥ್, ಮುನಿರತ್ನ, ಡಾ.ರಂಗನಾಥ್, ಶರಣಗೌಡ ಕಂದಕೂರ್, ಬೋಜೇಗೌಡ, ಹರೀಶ್‌ಗೌಡ, ವೈಎಸ್‌ವಿ ದತ್ತ, ಸಿ. ಎನ್.ಬಾಲಕೃಷ್ಣ, ಜಿ.ಟಿ.ದೇವೇಗೌಡ, ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್ ಸೇರಿ ಹಲವು ರಾಜಕೀಯ ಗಣ್ಯರ ದಂಡೇ ಆಗಮಿಸಿತ್ತು.

## ನಮ್ಮ ತಾಯಿಯ ಬದುಕು ಜೀವನಕ್ಕೆ ಸ್ಫೂರ್ತಿ

### ಹೆಚ್.ಡಿ.ಕುಮಾರಸ್ವಾಮಿ ಭಾವುಕ ನುಡಿ

**ಹೊಳೆನರಸೀಪುರ:** ನಮ್ಮ ತಾಯಿ ಅಂತಿಮವಾಗಿ ಜೀವನದ ಪಯಣ ಮುಗಿಸಿದ್ದಾರೆ. ಅವರು ನಮ್ಮಿಂದ ದೂರವಾದರೂ ನಾನು ಬದುಕಿರುವವರೆಗೂ ನಮ್ಮ ತಾಯಿ ಶಾಶ್ವತವಾಗಿ ನನ್ನ ಹೃದಯದಲ್ಲಿ ನೆಲೆಸಿರುತ್ತಾರೆಂದು ಹೆಚ್.ಡಿ. ಕುಮಾರಸ್ವಾಮಿ ಅವರು ಭಾವುಕರಾಗಿ ನುಡಿದರು.

ತಾಯಿಯ ಅಂತಿಮ ಸಂಸ್ಕಾರದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ತಾಯಿಯ ಬದುಕು, ಅವರ ಆದರ್ಶಗಳು ಮತ್ತು ಜೀವನವನ್ನು ನಡೆಸಿದ ರೀತಿ ತಮ್ಮ ಕುಟುಂಬಕ್ಕೆ ಸದಾ ಸ್ಫೂರ್ತಿಯಾಗಿದೆ. ಅವರ ಭಾವನೆಗಳನ್ನು ಮುಂದುವರಿಸಿಕೊಂಡು ಹೋಗುವುದು ತಮ್ಮ ಕರ್ತವ್ಯವೆಂದು ತಿಳಿಸಿದರು.

ನಮ್ಮ ತಾಯಿಗೆ ಅಂತಿಮ ಪುಷ್ಪ ನಮನ, ಮಣ್ಣನ್ನು ಹಾಕುವ ಸಂದರ್ಭದಲ್ಲಿ ನನ್ನಿಂದ ತಪ್ಪುಗಳಾಗಿದ್ದಾರೆ ಕ್ಷಮಿಸು ಎಂದು ಕೇಳಿಕೊಂಡಿದ್ದೇನೆ. ಹಲವು ಸಂದರ್ಭದಲ್ಲಿ ನಮ್ಮಿಂದಲೂ ಕೆಲವು ತಪ್ಪುಗಳಾಗಿವೆ. ನನ್ನಿಂದ ನಿನ್ನ ಹೃದಯಕ್ಕೆ ನೋವಾಗಿದ್ದರೆ ಕ್ಷಮಿಸು ಎಂದು ಬೇಡಿಕೊಂಡಿದ್ದೇನೆ ಎಂದರು



**ಧನ್ಯವಾದ ತಿಳಿಸಿದ ಹೆಚ್.ಡಿ.ಕೆ.**

ಚನ್ನಮ್ಮ ಅವರು ನಮಗೆ ಮಾತ್ರ ತಾಯಿಯಲ್ಲ, ನಿಮ್ಮೆಲ್ಲರಿಗೂ ತಾಯಿ ಎಂದು ಭಾವಿಸಿ ಮೂರು ದಿನಗಳ ಕಾಲ ನಮ್ಮೊಂದಿಗಿದ್ದ ಎಲ್ಲರಿಗೆ ಧನ್ಯವಾದ ಹೇಳುತ್ತೇನೆ. ರಾಜ್ಯ ಸರ್ಕಾರದ ಪರವಾಗಿ ಮುಖ್ಯಮಂತ್ರಿ, ಸಚಿ ವರು, ಶಾಸಕರು, ಭಾಗವಹಿಸಿ ದ್ದಾರೆ. ಕೇಂದ್ರ ಸರ್ಕಾರದ ಪರವಾಗಿ ಸಚಿವರು ಆಗಮಿಸಿ ಗೌರವ ಸಲ್ಲಿಸಿ ದ್ದಾರೆ. ಅಂತಿಮ ಸಂಸ್ಕಾರದಲ್ಲಿ ಸ್ವಾಮೀಜಿಗಳು ಸಾನಿಧ್ಯ ವಹಿಸಿ ನನ್ನ ತಾಯಿಗೆ ಮುಕ್ತಿ ನೀಡಿದ್ದಾರೆ. ಸಾರ್ವಜನಿಕರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿದ ಜಿಲ್ಲಾಡಳಿತ, ಪೊಲೀಸ್ ಇಲಾಖೆಗೆ ಧನ್ಯವಾದ ಹೇಳಿದರು.

ನಮ್ಮ ತಾಯಿ ರಾಜಕೀಯ ಕುಟುಂಬದಲ್ಲಿದ್ದರೂ ರಾಜಕೀಯವನ್ನು ಮೈಗಂಟಿಸಿಕೊಳ್ಳದೆ, ಮಾದರಿಯಾಗಿ ಜೀವನ ಸಾಗಿಸಿದ್ದಾರೆಂದು ಸುದ್ದಿ ಮಾಧ್ಯಮಗಳಲ್ಲಿ ಬಿತ್ತರಿಸಿದ್ದಾರೆ. ನಮ್ಮ ತಂದೆ-ತಾಯಿ ಅವರ ಕೊನೆಯ ಘಳಿಗೆಯ ಆತ್ಮೀಯ ದೃಶ್ಯಗಳನ್ನು ನಾಡಿನ ಜನತೆಗೆ ತೋರಿಸಿ, ಮಾದರಿ ಎಂಬು ತೋರಿಸಿರುವುದಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.



## ಬೀಗದೆ ಬಾಗಿ ಬದುಕಿದ ಮಹಾತಾಯಿ ಚನ್ನಮ್ಮ: ಶಂಭುನಾಥ ಶ್ರೀ

**ಹೊಳೆನರಸೀಪುರ:** ಎಷ್ಟೇ ಎತ್ತರಕ್ಕೇರಿದರೂ ಬೀಗದೆ ಬಾಗಿ ಬದುಕಿದವರು ಶ್ರೀಮತಿ ಚನ್ನಮ್ಮ ದೇವೇಗೌಡರು ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಸುದೀರ್ಘ ರಾಜಕೀಯ ಪಯಣದಲ್ಲಿ ಜೊತೆಯಾಗಿದ್ದ ಶ್ರೀಮತಿ ಚನ್ನಮ್ಮ ಅವರ ಅಗಲಿಕೆ ತುಂಬಲಾರದ ನಷ್ಟವುಂಟು ಮಾಡಿದೆ. ಕುಟುಂಬಸ್ಥರು ಹಾಗು ಅಭಿಮಾನಿಗಳಿಗೆ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸಿದರು.

ಪತಿ ದೇಶದ ಪ್ರಧಾನಿ, ಪುತ್ರ ಮುಖ್ಯಮಂತ್ರಿ, ಮತ್ತೊಬ್ಬ ಪುತ್ರ ಸಚಿವರಾಗಿದ್ದಾಗಲೂ ಚನ್ನಮ್ಮ ಒಂದು ದಿನವೂ ಅಧಿಕಾರದ ಅಹಂ ಅನ್ನು ಹತ್ತಿರಕ್ಕೆ ಬಿಟ್ಟುಕೊಳ್ಳಲಿಲ್ಲ, ಸಹಾಯ ಕೇಳಿ ಬಂದವರಿಗೆ ನೆರವಾಗುವುದನ್ನು ಮಾತ್ರ ನಿತ್ಯ ಕಾಯಕವಾಗಿಸಿಕೊಂಡಿದ್ದರೆಂದರು.



ಅವರ ಪೂಜಾ ಫಲ, ತಪಸ್ಸಿನ ಫಲವಾಗಿ ಹೆಚ್.ಡಿ.ದೇವಗೇಗೌಡ ಅವರು ಅತ್ಯುನ್ನತ ಸ್ಥಾನ ಅಲಂಕರಿಸಿದರು. ಆದರ್ಶ ಗೃಹಿಣಿಯಾಗಿ, ತಾಯಿಯಾಗಿ ಅವರು ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ. ಆದರ್ಶ ದಂಪತಿಗೆ ದೇವೇಗೌಡರು ಹಾಗು ಚನ್ನಮ್ಮ ಸಾಕ್ಷಿಯಾಗಿದ್ದಾರೆ. ಚನ್ನಮ್ಮ ಅವರ ಅಂತಿಮ ಸಂಸ್ಕಾರಕ್ಕೆ ಜನರು ಭಾಗವಹಿಸಿರುವುದು ಅವರ ಉದಾರತೆಗೆ ಸಾಕ್ಷಿಯಾಗಿದೆ. ಅವರ ಆದರ್ಶ, ಭಕ್ತಿಯನ್ನು ನಾವೆಲ್ಲರೂ ಸ್ಮರಿಸಬೇಕು. ಅವರ ಮನೆಯ ಮಕ್ಕಳು, ಮೊಮ್ಮಕ್ಕಳು ಅದೇ ಸಂಸ್ಕಾರ ಮುಂದುವರಿಸಿಕೊಂಡು ಹೋಗುತ್ತಾರೆಂಬ ವಿಶ್ವಾಸವಿದೆ ಎಂದರು.

# ಚನ್ನಮ್ಮ ದರ್ಶನಕ್ಕೆ ಭಾರೀ ನೂಕುನುಗ್ಗಲು

• ಪ್ರಜೋದಯ ವರದಿ

**ಹೊಳೆನರಸೀಪುರ:** ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಅಂತಿಮ ದರ್ಶನಕ್ಕಾಗಿ ಸಾವಿರಾರು ಮಂದಿ ಪುತ್ರ ರೇವಣ್ಣ ಅವರ ನಿವಾಸದ ಎದುರು ನೆರೆದಿದ್ದರಿಂದ ಭಾರೀ ನೂಕುನುಗ್ಗಲು ಉಂಟಾಯಿತು.

ಭಾನುವಾರ ತಡರಾತ್ರಿ ಪಟ್ಟಣಕ್ಕೆ ಆಗಮಿಸಿದ ಪಾರ್ಥಿವ ಶರೀರ ವೀಕ್ಷಣೆಗೆ ಸಹಸ್ರಾರು ಜನರು ಕಾದಿದ್ದರು. ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ನಿವಾಸದ ಎದುರು ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಬೆಳಗಿನ ಜಾವ 4 ಗಂಟೆಯಿಂದಲೇ ಸರದಿ ಸಾಲಿನಲ್ಲಿ ಬಂದ ಜನರು ಚನ್ನಮ್ಮ ಅವರನ್ನು ಕೊನೆಯ ಬಾರಿ ಕಣ್ತುಂಬಿಕೊಂಡರು. ಬೆಳಿಗ್ಗೆ 10 ಗಂಟೆವರೆಗೆ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದ ಪೊಲೀಸರು ನಂತರ ಮುಖ್ಯ ಗೇಟ್ ಬಂದ್ ಮಾಡಿ ಅಂತಿಮ ವಿಧಿವಿಧಾನ ಕಾರ್ಯಕ್ಕೆ ಅನುವು ಮಾಡಿಕೊಟ್ಟರು. ಬಳಿಕ ಜನಪ್ರತಿನಿಧಿಗಳು, ಕುಟುಂಬಸ್ಥರು ಹಾಗು ಗಣ್ಯರಿಗಷ್ಟೇ ಅವಕಾಶ ಕಲ್ಪಿಸಲಾಯಿತು.

ನಂತರ ಪೂಜಾ ವಿಧಿವಿಧಾನ ನೆರವೇರಿಸಲಾಯಿತು. ಶ್ರೀಮತಿ ಚನ್ನಮ್ಮ ಅವರ ಹಿರಿಯ ಪುತ್ರ ಬಾಲಕೃಷ್ಣ ಅವರು ಕೈಂಕರ್ಯದಲ್ಲಿ ಭಾಗಿಯಾದರು. ಪುತ್ರಿಯರಾದ ಅನುಸೂಯ, ಶೈಲಜಾ, ಸೊಸೆ ಭವಾನಿ ರೇವಣ್ಣ ಅವರು ಸ್ಥಳದಲ್ಲಿದ್ದರು.

ಮಧ್ಯಾಹ್ನ 12.20ಕ್ಕೆ ನಿವಾಸದಿಂದ ಪಾರ್ಥಿವ ಶರೀರದ ಮೆರವಣಿಗೆ ಪ್ರಾರಂಭವಾಯಿತು. ಪಟ್ಟಣದ ಮುಖ್ಯ ರಸ್ತೆಯಲ್ಲಿ ಸಾಗಿದ ಮೆರವಣಿಗೆ ಕೃಷ್ಣಾಪುರ, ನಾಗಲಾಪುರ, ಮಾರಗೋಡನಹಳ್ಳಿ, ಸಂಕನಹಳ್ಳಿ, ಪಡುವಲಹಿಪ್ಪೆ, ಮಾಕವಳ್ಳಿ, ಹಂಗರಹಳ್ಳಿ, ಹಳೇಕೋಟೆ ಮಾರ್ಗವಾಗಿ ಮಧ್ಯಾಹ್ನ 3.20ಕ್ಕೆ ಮಾವಿನಕೆರೆ ರಂಗನಾಥಸ್ವಾಮಿ ಬೆಟ್ಟದ ತಪ್ಪಲಿನಲ್ಲಿನ ಸಮಾಧಿ ಸ್ಥಳಕ್ಕೆ ತಲುಪಿತು.



**ಅಂತಿಮ ದರ್ಶನಕ್ಕೆ ಜನಸಾಗರ**


ಭಾನುವಾರ ಮಧ್ಯಾಹ್ನ ಬೆಂಗಳೂರಿನಿಂದ ಆರಂಭವಾದ ಶ್ರೀಮತಿ ಚನ್ನಮ್ಮ ಅವರ ಪಾರ್ಥಿವ ಶರೀರ ಶ್ರದ್ಧಾಂಜಲಿ ವಾಹನ ಬೆಳಗಿನ ಜಾವ 4 ಗಂಟೆ ಪಟ್ಟಣ ತಲುಪಿತು. ಪಾರ್ಥಿವ ಶರೀರ ಪಟ್ಟಣಕ್ಕೆ ಆಗಮಿಸಿದ ಸುದ್ದಿ ತಿಳಿದು ಸುತ್ತಲಿನ ಜನರು ಸಾಗರೋಪಾದಿಯಲ್ಲಿ ಹರಿದು ಬಂದರು. ಬೆಳಿಗ್ಗೆ 10 ಗಂಟೆ ನಂತರ ಜನರಿಗೆ ಪ್ರವೇಶ ನಿಷೇಧಿಸಿದ್ದರಿಂದ ಗೇಟ್ ಹೊರಗಡೆ ಸಾಕಷ್ಟು ಜನರು ಕಾದು ನಿಂತಿದ್ದರು. ಮುಖ್ಯ ರಸ್ತೆ, ಮೇಲ್ಸೇತುವೆಯುದ್ದಕ್ಕೂ ಸಹಸ್ರಾರು ಸಂಖ್ಯೆಯಲ್ಲಿ ದೇವೇಗೌಡರ ಕುಟುಂಬದ ಅಭಿಮಾನಿಗಳು ನಿಂತಿದ್ದರು. ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಿ ಎಂದು ಅನೇಕರು ಗೇಟ್ ಬಳಿಗೆ ನಿಂತು ಪೊಲೀಸರ ಬಳಿ ಗೋಗರೆಯುತ್ತಿದ್ದ ದೃಶ್ಯ ಕಂಡು ಬಂತು. ಆದರೆ, ಜನ ದಟ್ಟಣೆ ನಿಯಂತ್ರಣ ಉದ್ದೇಶದಿಂದ ಭದ್ರತಾ ಸಿಬ್ಬಂದಿ ಅತಿಥಿ ಗಳನ್ನು ಹೊರತುಪಡಿಸಿ ಅವಕಾಶ ನೀಡಲಿಲ್ಲ.

ಅಹಿತಕರ ಘಟನೆ ಸಂಭವಿಸದಂತೆ ಬಿಗಿ ಪೊಲೀಸ್ ಭದ್ರತೆ ಕೈಗೊಳ್ಳಲಾಗಿತ್ತು. ಐಜಿಪಿ ಸಲೀಂ, ದಕ್ಷಿಣ ವಲಯ ಐಜಿ ಬೋರ ಲಿಂಗಯ್ಯ, ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ ಅವರು ನಿವಾಸದಲ್ಲೇ ಠಿಕಾಣಿ ಹೂಡಿ ಕಾನೂನು ಸುವ್ಯಸ್ಥೆ ಕಾಪಾಡಿದರು. ಅಂತಿಮ ಯಾತ್ರೆ, ಸಾರ್ವಜನಿಕ ದರ್ಶನ, ಪಾರ್ಕಿಂಗ್ ವ್ಯವಸ್ಥೆಯಲ್ಲಿ ಯಾವುದೇ ಲೋಪಗಳಾಗದಂತೆ ಬಿಗಿ ಭದ್ರತೆ ಒದಗಿಸಿದ್ದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಅಧೀನ ಅಧಿಕಾರಿಗಳಿಗೆ ಕಾಲಕಾಲಕ್ಕೆ ಸೂಕ್ತ ನಿರ್ದೇಶನ ನೀಡುತ್ತಾ ಶಾಂತಿಯುತ ಪ್ರಕ್ರಿಯೆಗೆ ಅನುಕೂಲ ಮಾಡಿಕೊಟ್ಟರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ, ವಿಧಾನ ಪರಿಷತ್ ಸದಸ್ಯ ಭೋಜೇಗೌಡ, ಮಾಜಿ ಶಾಸಕ ವೈ.ಎಸ್.ವಿ.ದತ್ತಾ, ಶಾಸಕರಾದ ಎ.ಮಂಜು, ಸಿ.ಎನ್.ಬಾಲಕೃಷ್ಣ, ಡಾ|| ಮಂಥರ್‌ಗೌಡ, ಹೆಚ್.ಪಿ.ಸ್ವರೂಪ್, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ. ಚನ್ನಮ್ಮ ಅವರ ಪುತ್ರರಾದ ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ, ಮೊಮ್ಮಕ್ಕಳಾದ ನಿಖಿಲ್ ಕುಮಾರಸ್ವಾಮಿ, ಸೂರಜ್ ರೇವಣ್ಣ ಸೇರಿ ಇತರರು ಹಾಜರಿದ್ದರು.





## ಗೌರವವಂದನೆ ಮುಗಿಯುವವರೆಗೂ ನಿಂತ ಸಿಎಂ

ಚನ್ನಮ್ಮ ಅವರ ಅಂತಿಮ ದರ್ಶನಕ್ಕೆ ಆಗಮಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೇವೇಗೌಡರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಸಚಿವರು, ಶಾಸಕರು, ಸಂಸದರು, ಗಣ್ಯರು, ಕುಟುಂಬಸ್ಥರು ಗೌರವವಂದನೆ ಸಲ್ಲಿಸುವರೆಗೂ ಮುಖ್ಯಮಂತ್ರಿ 50 ನಿಮಿಷಕ್ಕೂ ಹೆಚ್ಚು ಕಾಲ ನಿಂತು ಗೌರವ ಸೂಚಿಸಿದರು. ಬಳಿಕ ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ ಅವರ ಬಳಿಕಗೆ ತೆರಳಿ ಸಂತೈಸಿದರು. ಈ ವೇಳೆ ರೇವಣ್ಣ ಅವರು ಕಣ್ಣೀರಿಡುತ್ತಿದ್ದಂತೆ ಆಲಂಗಿಸಿಕೊಂಡು ಸಮಾಧಾನ ಪಡಿಸಿದರು. ಮುಖ್ಯಮಂತ್ರಿಯೊಂದಿಗೆ ಸಚಿವರು, ಮಾಜಿ ಸಚಿವರು ಜೊತೆಗಿದ್ದರು.

# ಇದೊಂದು ಬೇಡಿಕೆ ಇಟ್ಟ ದೇವೇಗೌಡರು!

## ಪುತ್ರ ರೇವಣ್ಣಗೆ ಕೊಟ್ಟ ಸೂಚನೆಯೇನು?

ಅಪ್ಪಟ ನೆಲ ಸಂಸ್ಕೃತಿಯ ಅನ್ನಪೂರ್ಣೆಯಂತಿದ್ದರು ಚೆನ್ನಮ್ಮ

ಮಾಜಿ ಪ್ರಧಾನಿ ದೇವೇಗೌಡರ ಯಶಸ್ಸಿಗೆ ಹೆಗಲಾಗಿದ್ದ ಪತ್ನಿ ಚೆನ್ನಮ್ಮ ವಿಧಿವಶರಾಗಿದ್ದಾರೆ. ಪತ್ನಿ ಅಗಲಿಕೆ ದೇವೇಗೌಡರಿಗೆ ಬರಸಿಡಿಲು ಬಡಿದಂತಾಗಿದೆ. ಜೀವದ ಒಡತಿಯನ್ನ ನೆನೆದು ಬಿಕ್ಕಿ ಬಿಕ್ಕಿ ಕಣ್ಣೀರಿಟ್ಟಿದ್ದಾರೆ. ರಾಜಕೀಯದ ಬಿರುಗಾಳಿಯಲ್ಲೂ ಬೆನ್ನೆಲುಬಾಗಿ ನಿಂತಿದ್ದ ಮೌನ ಶಕ್ತಿ. ರಾಜಕಾರಣದ ಹೆಮ್ಮರವಾಗಿ ನಿಂತ ಗೌಡರ ಒಡನಾಡಿ. ರಾಜಕಾರಣದಲ್ಲಿ ದೇವೇಗೌಡ ಯೋಗ ಎಷ್ಟಿತ್ತೋ, ಅಷ್ಟೇ ಚೆನ್ನಮ್ಮನವರ ತ್ಯಾಗವೂ ಇತ್ತು. ಜೀವನದುದ್ದಕ್ಕೂ ಜೊತೆ ಜೊತೆಯಾಗಿ ನಡೆದ ಚೆನ್ನಮ್ಮ, ಇದೀಗ ದೇವೇಗೌಡರನ್ನ ಒಂಟಿಯಾಗಿಸಿದ್ದಾರೆ.

**ಸಂಸ್ಕೃತಿಯ ಜೀವಂತ ಪ್ರತೀಕ..**

ಚನ್ನಮ್ಮ ದೇವೇಗೌಡರು ನಮ್ಮ ನೆಲದ ಮೂಲ ಸಂಸ್ಕೃತಿಯ ಜೀವಂತ ಪ್ರತೀಕವಾಗಿದ್ದರು. ಅವರ ಮನೆಗೆ ಯಾರೇ ಬಂದರೂ ಊಟೋಪಚಾರವಿಲ್ಲದೆ, ಕನಿಷ್ಠ ಒಂದು ಕಪ್ ಕಾಫಿ ಅಥವಾ ಚಹಾವನ್ನಾದರೂ ನೀಡದೆ ಕಳುಹಿಸುತ್ತಿರಲಿಲ್ಲ. ಅವರ ಆತಿಥ್ಯದಲ್ಲಿ ಅಪ್ಪಟ ಹಳ್ಳಿಯ ಸೊಗಡು, ಆತ್ಮೀಯತೆ ಮತ್ತು ಮಾನವೀಯತೆ ತುಂಬಿ ತುಳುಕುತ್ತಿತ್ತು.

ಅವರನ್ನು ಭೇಟಿ ಮಾಡಲು ಬಂದವರೊಂದಿಗೆ ಅವರು ಕೇವಲ ಔಪಚಾರಿಕವಾಗಿ ಮಾತನಾಡುತ್ತಿರಲಿಲ್ಲ. ಅವರ ಊರು, ಅಪ್ಪ-ಅಮ್ಮ, ಅಕ್ಕ-ತಂಗಿ, ಅತ್ತೆ-ಮಾವ? ಹೀಗೆ ಕುಟುಂಬದವರ ಯೋಗಕ್ಷೇಮವನ್ನು ಪ್ರೀತಿಯಿಂದ ವಿಚಾರಿಸುತ್ತಿದ್ದರು. ಯಾರನ್ನೂ ಹೆಸರಿನಿಂದ ಮಾತ್ರ ಕರೆಯದೆ, ಸೋಮಣ್ಣ, ರಾಮಣ್ಣ, ಮಹೇಶಣ್ಣ ಎಂದು ಅಣ್ಣ-ತಮ್ಮ ಎಂಬ ಆತ್ಮೀಯ ಸಂಬೋಧನೆಯಲ್ಲಿಯೇ ಮಾತನಾಡುತ್ತಿದ್ದರು. ಅವರ ಮಾತುಗಳಲ್ಲಿ ಹಳ್ಳಿಯ ಸೊಗಡು, ಪ್ರೀತಿ ಮತ್ತು ಆತ್ಮೀಯತೆ ಸಹಜವಾಗಿ ಬೆರೆತಿರುತ್ತಿತ್ತು.

ನನಗೆ ಅವರೊಂದಿಗೆ ಅತ್ಯಂತ ಆತ್ಮೀಯ ಒಡನಾಟವಿತ್ತು. ಪ್ರತಿದಿನ ಸಂಜೆ ಅನುಗ್ರಹದ ಹುಲ್ಲುಹಾಸಿನ ಮೇಲೆ ಅವರು ವಾಕಿಂಗ್‌ಗೆ ಬರುತ್ತಿದ್ದರು. ಆಗ ನಾನು ಸಹ ಅವರೊಂದಿಗೆ ಸೇರಿ ನಡೆಯುತ್ತಿದ್ದೆ. ಆ ಸಮಯದಲ್ಲಿ ಊರು, ಜನ, ಸಂಸ್ಕೃತಿ, ಕುಟುಂಬ ಮತ್ತು ಬದುಕಿನ ಕುರಿತು ಅನೇಕ ಆತ್ಮೀಯ ಮಾತು ಕತೆಗಳು ನಡೆಯುತ್ತಿದ್ದವು. ಕೆಲವು ಸಂದರ್ಭಗಳಲ್ಲಿ ಅವರೊಂದಿಗೆ ದೇವಸ್ಥಾನಗಳಿಗೂ ಹೋಗುವ ಅವಕಾಶವೂ ನನಗೆ ದೊರೆತಿತ್ತು.

ಒಮ್ಮೆ ದೇವೇಗೌಡರು ಪ್ರಧಾನಮಂತ್ರಿಯಾಗಿದ್ದ ಸಂದರ್ಭದಲ್ಲಿ ತಿರುಪತಿಗೆ ಅವರೊಂದಿಗೆ ಹೋಗಿದ್ದೆ. ನಾವು ತಂಗಿದ್ದ ಅತಿಥಿಗೃಹದ ಎಸಿ ಅವರಿಗೆ ಇಷ್ಟವಾಗದೆ ನನ್ನನ್ನು ಕರೆದು ಇದು ನನಗೆ ಕಿರಿಕಿರಿ ಮಾಡುತ್ತಿದೆ ನಿದ್ದೆ ಬರುತ್ತಿಲ್ಲ ಎಸಿಯನ್ನು ಅಪ್ ಮಾಡು ಎಂದರು. (ಇದು ಅವರ ಸರಳ ಜೀವನಕ್ಕೆ ಉದಾಹರಣೆ) ಅವರ ದೈವಭಕ್ತಿ, ಪೂಜೆಯಲ್ಲಿನ ಶ್ರದ್ಧೆ ಮತ್ತು ಸರಳ ಜೀವನಶೈಲಿ ನನ್ನ ಮೇಲೆ ಆಳವಾದ ಪ್ರಭಾವ ಬೀರಿದ್ದವು.

**ಎಲ್ಲ ಅತಿಥಿಗಳಿಗೆ ಕಾಫಿ-ಚಹಾದ ಆತಿಥ್ಯ ಮಾಡಲಾಗುತ್ತಿತ್ತು..**

ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗಲೂ, ನಂತರ ಪ್ರಧಾನಮಂತ್ರಿಯಾಗಿದ್ದಾಗಲೂ ಅನುಗ್ರಹ ನಿವಾಸಕ್ಕೆ ಪ್ರತಿದಿನ ನೂರಾರು ಜನರು ಬರುತ್ತಿದ್ದರು. ಆ ಎಲ್ಲ ಅತಿಥಿಗಳಿಗೆ ಕಾಫಿ-ಚಹಾದ ಆತಿಥ್ಯ ನೀಡುವುದಕ್ಕಾಗಿ ಅಲ್ಲಿಯೇ ಹಸುಗಳನ್ನು ಸಾಕಲಾಗುತ್ತಿತ್ತು. ನನ್ನ ತಿಳಿವಳಿಕೆಯ ಮಟ್ಟಿಗೆ, ಮನೆಯಲ್ಲಿಯೇ ಹಸುಗಳನ್ನು ಕಟ್ಟಿ, ಅವುಗಳ ಹಾಲನ್ನು ಸಂಪೂರ್ಣವಾಗಿ ಅತಿಥಿ ಸತ್ಕಾರಕ್ಕಾಗಿ ಬಳಸಿದ ರಾಜ್ಯದ ಮುಖ್ಯಮಂತ್ರಿ ಮತ್ತು ಮಾಜಿ ಪ್ರಧಾನ ಮಂತ್ರಿಗಳ ಅಪರೂಪದ ಮನೆ ಇದೇ ಇರಬೇಕು. ಈ ವ್ಯವಸ್ಥೆ ಚನ್ನಮ್ಮ ದೇವೇಗೌಡರ ವಿಶೇಷ ಕಾಳಜಿ ಮತ್ತು ಒತ್ತಾಯದಿಂದಲೇ ನಡೆದಿತ್ತು.

**ಸಾಕಿದ ಹಸುಗಳ ಹಾಲಿನ ಚಹಾ...**

ಇಲ್ಲಿಯೇ ಸಾಕಿದ ಹಸುಗಳ ಹಾಲಿನಿಂದಲೇ ಅಲ್ಲಿನ ಸಿಬ್ಬಂದಿ, ಪೊಲೀಸ್ ಸಿಬ್ಬಂದಿಯೂ ಸೇರಿದಂತೆ ಹಾಗೂ ಮನೆಗೆ ಬಂದ ಪ್ರತಿಯೊಬ್ಬ ಅಧಿಕಾರಿಗಳು ಮತ್ತು ಗಣ್ಯರಿಗೂ ಕಾಫಿ-ಚಹಾ ನೀಡಲಾಗುತ್ತಿತ್ತು. ಹಬ್ಬ-ಹರಿದಿನಗಳ ಸಂದರ್ಭದಲ್ಲಿ ಅನುಗ್ರಹದಲ್ಲಿದ್ದ ಸಿಬ್ಬಂದಿ, ಪೊಲೀಸ್ ಸಿಬ್ಬಂದಿ ಮತ್ತು ಅಲ್ಲಿ ಕೆಲಸ ಮಾಡುತ್ತಿದ್ದ ಪ್ರತಿಯೊಬ್ಬರಿಗೂ ತಪ್ಪದೇ ಊಟದ ವ್ಯವಸ್ಥೆ ಇರುತ್ತಿತ್ತು. ಇದು ಚನ್ನಮ್ಮ ದೇವೇಗೌಡರ ಸ್ಪಷ್ಟ ಆದೇಶವಾಗಿತ್ತು. ಯಾರೂ ಹಸಿವಿನಿಂದ ಹಿಂದಿರುಗಬಾರದು ಎಂಬ ಅವರ ಕಾಳಜಿಯೇ ಅವರನ್ನು ನಿಜವಾದ ಅರ್ಥದಲ್ಲಿ ಅನ್ನಪೂರ್ಣೆಯನ್ನಾಗಿ ಮಾಡಿತ್ತು.

**ಹಾಸನ ಜಿಲ್ಲೆಯ ಜನರು ಯಾವುದೇ ಹಿಂಜರಿಕೆಯಿಲ್ಲದೆ ಬಂದು ದೇವೇಗೌಡರನ್ನು ಭೇಟಿಯಾಗಬಹುದಿತ್ತು..**

ಮುಖ್ಯಮಂತ್ರಿಯವರಾಗಿದ್ದಾಗಲೂ, ಪ್ರಧಾನಮಂತ್ರಿಯವರಾಗಿದ್ದಾಗಲೂ ಅವರ ನಿವಾಸ ಮತ್ತು ಕಚೇರಿಗೆ ಹೋಗುವುದು ಅಷ್ಟೇನು ಕಷ್ಟದ ಕೆಲಸವಾಗಿರಲಿಲ್ಲ. ವಿಶೇಷವಾಗಿ ಹಾಸನ ಜಿಲ್ಲೆಯ ಜನರು ಯಾವುದೇ ಹಿಂಜರಿಕೆಯಿಲ್ಲದೆ ಬಂದು ದೇವೇಗೌಡರನ್ನು ಭೇಟಿಯಾಗಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಕೆಲಸ ಮುಗಿದ ನಂತರ ಊಟ ಮಾಡಿ, ಊರಿಗೆ ಹಿಂದಿರುಗಲು ಬಸ್ ಪ್ರಯಾಣದ ವೆಚ್ಚಕ್ಕೂ ಹಣವನ್ನು ಪಡೆದು ಹೋಗುತ್ತಿದ್ದರು. ಈ ರೀತಿಯ ಮಾನವೀಯ ವ್ಯವಸ್ಥೆಯ ಹಿಂದೆ ಚನ್ನಮ್ಮ ದೇವೇಗೌಡರ ಕಾಳಜಿ ಮತ್ತು ಹೃದಯವಂತಿಕೆಯೇ ಇತ್ತು. ಯಾರೂ ಖಾಲಿ ಹೊಟ್ಟೆಯಿಂದಲೂ, ಖಾಲಿ ಕೈಯಿಂದಲೂ ಹಿಂದಿರುಗಬಾರದು ಎಂಬುದು ಅವರ ಬದುಕಿನ ಧ್ಯೇಯವಾಗಿತ್ತು.

ಅವರ ಪ್ರೀತಿ ಮತ್ತು ಆತ್ಮೀಯತೆ ಕುಟುಂಬದ ಸದಸ್ಯರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಆ ಸಂದರ್ಭದಲ್ಲಿ ಅವರ ಭದ್ರತೆಯಲ್ಲಿದ್ದ ಗನ್‌ಮ್ಯಾನ್‌ಗಳಾದ ಬೋರೇಗೌಡ, ಮಾದೇಗೌಡ, ತಿಮ್ಮೇಗೌಡ ಮತ್ತು ಗಜೇಂದ್ರ ಅವರನ್ನೂ ಮನೆಯ ಸದಸ್ಯರಂತೆಯೇ ಕಾಣುತ್ತಿದ್ದರು. ಅವರ ಯೋಗಕ್ಷೇಮವನ್ನು ವಿಚಾರಿಸುವುದು, ಹಬ್ಬ-ಹರಿದಿನಗಳಲ್ಲಿ ಅವರನ್ನೂ ಕುಟುಂಬದವರೊಂದಿಗೆ ಸೇರಿಸಿಕೊಳ್ಳುವುದು, ಊಟೋಪಚಾರದಲ್ಲಿ ಯಾವುದೇ ಭೇದಭಾವ ತೋರಿಸದಿರುವುದು ಅವರ ಸಹಜ ಗುಣವಾಗಿತ್ತು.

**ಎಲ್ಲರ ಜೊತೆ ಆತ್ಮೀಯ ಒಡನಾಟ..**

ಆ ಕಾಲದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಇನ್ನಷ್ಟೇ ಚಿಗುರುತ್ತಿದ್ದ ಇಂದಿನ ಹಿರಿಯ ರಾಜಕಾರಣಿಗಳಾದ ಚಲುವರಾಯಸ್ವಾಮಿ, ಸಿ.ಎಸ್. ಪುಟ್ಟರಾಜು, ಚನ್ನರಾಯಪಟ್ಟಣದ ಬಾಲಕೃಷ್ಣ ಹಾಗೂ ಕೆ.ಆರ್.ಪೇಟೆಯ ದೇವರಾಜು ಅವರೊಂದಿಗೂ ಚನ್ನಮ್ಮ ದೇವೇಗೌಡರಿಗೆ ಅತ್ಯಂತ ಆತ್ಮೀಯ ಒಡನಾಟವಿತ್ತು. ಎಲ್ಲರನ್ನೂ ತಮ್ಮ ಮನೆಯ ಮಕ್ಕಳಂತೆಯೇ ಪ್ರೀತಿಯಿಂದ ಕಾಣುವ ವಿಶಾಲ ಹೃದಯ ಅವರದ್ದಾಗಿತ್ತು.

ನನ್ನ ಅನುಭವದ ಪ್ರಕಾರ, ಹಾಸನ ಜಿಲ್ಲೆಯಲ್ಲಿ ಚನ್ನಮ್ಮ ದೇವೇಗೌಡರಷ್ಟು ಜನರ ಸುಖ-ದುಃಖಗಳಲ್ಲಿ ಪಾಲ್ಗೊಂಡ ಮತ್ತೊಬ್ಬ ವ್ಯಕ್ತಿಯನ್ನು ಕಂಡಿಲ್ಲ. ಮದುವೆ, ಮುಂಜಿ, ಗೃಹಪ್ರವೇಶ, ಸಾವು-ನೋವು? ಯಾವುದೇ ಶುಭ ಅಥವಾ ದುಃಖದ ಸಂದರ್ಭದಲ್ಲಿ ಸಾಧ್ಯವಾದಷ್ಟು ಉಪಸ್ಥಿತರಾಗಿ ಜನರೊಂದಿಗೆ ನಿಲ್ಲುವುದು ಅವರ ಜೀವನದ ಅವಿಭಾಜ್ಯ ಭಾಗವಾಗಿತ್ತು.

ಗ್ರಾಮೀಣ ಭಾಗದ ಅನೇಕ ಯುವಕರಿಗೆ ಉದ್ಯೋಗ ದೊರಕುವಂತೆ ನೆರವಾಗುವುದು, ಅವರ ಜೀವನ ನೆಲೆಗೊಳ್ಳುವಂತೆ ಪ್ರೋತ್ಸಾಹಿಸುವುದು, ನಂತರ ಅವರ ಮದುವೆಗಳನ್ನು ನೆರವೇರಿಸಲು ಸಹಕಾರ ನೀಡುವುದು, ಅಗತ್ಯವಿದ್ದವರಿಗೆ ತಾಳಿ, ಬಟ್ಟೆ ಹಾಗೂ ಇತರ ಮದುವೆಯ ಸಾಮಗ್ರಿಗಳನ್ನು ಒದಗಿಸುವುದು ಅವರ ಸೇವೆಯ ಮತ್ತೊಂದು ಮುಖವಾಗಿತ್ತು. ಇದು ಕೇವಲ ದಾನವಲ್ಲ; ಒಂದು ಕುಟುಂಬದ ಹಿರಿಯ ಸದಸ್ಯೆಯಾಗಿ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸಿದ ರೀತಿಯಾಗಿತ್ತು.

ಅವರ ಸರಳತೆ ನನ್ನನ್ನು ಸದಾ ಆಕರ್ಷಿಸುತ್ತಿತ್ತು. ಯಾವುದೇ ಆಡಂಬರವಿಲ್ಲದ ಅವರ ಜೀವನಶೈಲಿ, ಎಲ್ಲರನ್ನೂ ಸಮಾನವಾಗಿ ಕಾಣುವ ಅವರ ವಿಶಾಲ ಮನಸ್ಸು ಮತ್ತು ಸಹಜ ಆತ್ಮೀಯತೆ ನನಗೆ ತುಂಬಾ ಇಷ್ಟವಾಗುತ್ತಿತ್ತು. ಎಷ್ಟೇ ಉನ್ನತ ಸ್ಥಾನದಲ್ಲಿದ್ದ ಕುಟುಂಬದ ಸದಸ್ಯೆಯಾಗಿದ್ದರೂ, ಅವರು ಎಂದಿಗೂ ಅಹಂಕಾರವನ್ನು ಮೈಗೂಡಿಸಿಕೊಳ್ಳದೆ, ಅಪ್ಪಟ ಹಳ್ಳಿಯ ಹೆಣ್ಣಿನ ಸಹಜತೆ, ಪ್ರೀತಿ ಮತ್ತು ಸೌಜನ್ಯವನ್ನು ಕೊನೆಯವರೆಗೂ ಉಳಿಸಿಕೊಂಡಿದ್ದರು.

ಅವರ ಪಾಲಿಗೆ ಜನಸೇವೆ ರಾಜಕೀಯದ ಭಾಗವಾಗಿರಲಿಲ್ಲ; ಅದು ಜೀವನದ ಧರ್ಮವಾಗಿತ್ತು. ಅದಕ್ಕಾಗಿಯೇ ಸಾವಿರಾರು ಕುಟುಂಬಗಳು ಅವರನ್ನು ತಮ್ಮ ಮನೆಯ ಸದಸ್ಯೆಯಂತೆ ಪ್ರೀತಿಸುತ್ತಿದ್ದವು. ಅವರು ರಾಜಕೀಯ ನಾಯಕರ ಪತ್ನಿ ಮಾತ್ರವಾಗಿರಲಿಲ್ಲ; ಜನರ ಸುಖ-ದುಃಖಗಳಲ್ಲಿ ಭಾಗಿಯಾಗಿದ್ದ ತಾಯಿಯಂತಿದ್ದವರು.

ಅನ್ನಪೂರ್ಣೆಯಂತಿದ್ದ, ಅಪ್ಪಟ ಹಳ್ಳಿ ಸಂಸ್ಕೃತಿಯ ಜೀವಂತ ಪ್ರತೀಕವಾಗಿದ್ದ ಚನ್ನಮ್ಮ ದೇವೇಗೌಡರ ಅಗಲಿಕೆ ನನಗೆ ವೈಯಕ್ತಿಕವಾಗಿಯೂ ಅಪಾರ ನೋವನ್ನುಂಟು ಮಾಡಿದೆ. ಅವರಂತಹ ಸರಳ, ಸಜ್ಜನ, ದಾನಶೀಲ ಮತ್ತು ಮಾನವೀಯ ವ್ಯಕ್ತಿತ್ವಗಳು ಅಪರೂಪ. ಅವರ ಜೀವನವೇ ಸೇವೆ, ಪ್ರೀತಿ ಮತ್ತು ಆತಿಥ್ಯದ ಮತ್ತೊಂದು ಹೆಸರಾಗಿತ್ತು.

### ಕೊನೆಯುಸಿರಿರುವವರೆಗೂ ಕೈಬಿಡದ ಪತಿ

- ಮೂಲಗಳ ಪ್ರಕಾರ, ಚೆನ್ನಮ್ಮ ಅವರು ಕೊನೆಯುಸಿರೆಳೆಯುವವರೆಗೂ ದೇವೇಗೌಡರು ಅವರ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡೇ ಕುಳಿತಿದ್ದರು. ಸತತವಾಗಿ ಪತ್ನಿಯ ಕೈಹಿಡಿದು ಸಾಂತ್ವನ ನೀಡುತ್ತಿದ್ದ ಗೌಡರು, ಕೊನೆಗೆ ಪತ್ನಿಯು ಇಹಲೋಕ ತ್ಯಜಿಸಿದ ತಕ್ಷಣ ಆ ಸ್ಪರ್ಶ ಕಳೆದುಕೊಂಡು ತೀವ್ರ ಭಾವುಕರಾಗಿ ಕಣ್ಣೀರಿಟ್ಟರು.
- ಸುಮಾರು ಏಳು ದಶಕಗಳ ಕಾಲ ಸುಖ-ದುಃಖಗಳನ್ನು ಸಮನಾಗಿ ಹಂಚಿಕೊಂಡ ಜೀವವೊಂದು ಸದ್ದಿಲ್ಲದೆ ಮರೆಯಾಗಿದೆ. ಜೀವನದ ಕೊನೆಯ ಹಂತದಲ್ಲಿ ತಮ್ಮ ಹಳೆಯ ಸಂಗಾತಿಯನ್ನು ಕಳೆದುಕೊಂಡು ದೇವೇಗೌಡರು ಇಂದು ಅನುಭವಿಸುತ್ತಿರುವ ಒಂಟಿತನ ಮತ್ತು ಮೌನವೇದನೆಯನ್ನು ಮಾತುಗಳಲ್ಲಿ ವಿವರಿಸುವುದು ಅಸಾಧ್ಯ. ಈ ವಿಡಿಯೋ ಇಬ್ಬರ ನಡುವಿನ ಅಮರ ಪ್ರೇಮಕ್ಕೆ ಹಾಗೂ ನಿಷ್ಕಲ್ಮಶ ದಾಂಪತ್ಯಕ್ಕೆ ಒಂದು ಸದಾಕಾಲದ ಸಾಕ್ಷಿಯಾಗಿ ಉಳಿದುಕೊಂಡಿದೆ.

### ಹಣೆಗೆ ಕುಂಕುಮ, ತಲೆಗೆ ಹೂ ಮುಡಿಸಿದ ದೇವೇಗೌಡರು...

**ವೈದ್ಯರು ಇನ್ನೇನು ಚೆನ್ನಮ್ಮ ಬದುಕುವ ಸಾಧ್ಯತೆ ಕಡಿಮೆ ಎಂದಾಗ ಭಾವುಕರಾಗಿದ್ದ ಅವರು, ಆಕೆಯ ಹಣೆಗೆ ಕುಂಕುಮ ಇಟ್ಟು, ತಲೆಗೆ ಹೂ ಮುಡಿಸಿದ್ದರು. ಈ ವೇಳೆ ಕೆಲ ಹೊತ್ತು ಚನ್ನಮ್ಮನ ಮುಖವನ್ನೇ ದಿಟ್ಟಿಸಿ ದೇವೇಗೌಡರು ಕಣ್ಣೀರಿಟ್ಟಿದ್ದರು. ಅದಾದ ಕೆಲವೇ ಕ್ಷಣದಲ್ಲಿ ಚನ್ನಮ್ಮ ಶಿವೈಕ್ಯರಾದರು.**

### ಕೊನೆ ಗಳಿಗೆಯಲ್ಲೂ ಕೈಬಿಡದ ದೇವೇಗೌಡರು

**» ಪತ್ನಿಯ ಅಗಲಿಕೆಯಿಂದ ದೇವೇಗೌಡರು ತೀವ್ರವಾಗಿ ನೊಂದಿದ್ದು, ಸದ್ಯ ಒಂಟಿಯಾಗಿದ್ದಾರೆ. ಅವರು ನಿಧನರಾಗುವ ಕೆಲವು ದಿನಗಳ ಮುನ್ನ ದೇವೇಗೌಡರು ಕಾಳಜಿಯಿಂದ ಆರೈಕೆ ಮಾಡಿದ ಭಾವುಕ ವಿಡಿಯೋ ವೈರಲ್ ಆಗಿದ್ದು, ಇವರ ಸುದೀರ್ಘ ಸಾಂಸಾರಿಕ ಬದುಕಿನ ನಿಷ್ಕಲ್ಮಶ ಪ್ರೀತಿಗೆ ಸಾಕ್ಷಿಯಾಗಿದೆ.**

ಮಾಜಿ ಪ್ರಧಾನಿ ದೇವೇಗೌಡರ ಯಶಸ್ಸಿಗೆ ಹೆಗಲಾಗಿದ್ದ ಪತ್ನಿ ಚೆನ್ನಮ್ಮ ವಿಧಿವಶರಾಗಿದ್ದಾರೆ. ಪತ್ನಿ ಅಗಲಿಕೆ ದೇವೇಗೌಡರಿಗೆ ಬರಸಿಡಿಲು ಬಡಿದಂತಾಗಿದೆ. ಜೀವದ ಒಡತಿಯನ್ನ ನೆನೆದು ಬಿಕ್ಕಿ ಬಿಕ್ಕಿ ಕಣ್ಣೀರಿಟ್ಟಿದ್ದಾರೆ. ರಾಜಕೀಯದ ಬಿರುಗಾಳಿಯಲ್ಲೂ ಬೆನ್ನೆಲುಬಾಗಿ ನಿಂತಿದ್ದ ಮೌನ ಶಕ್ತಿ. ರಾಜಕಾರಣದ ಹೆಮ್ಮರವಾಗಿ ನಿಂತ ಗೌಡರ ಒಡನಾಡಿ. ರಾಜಕಾರಣದಲ್ಲಿ ದೇವೇಗೌಡ ಯೋಗ ಎಷ್ಟಿತ್ತೋ, ಅಷ್ಟೇ ಚೆನ್ನಮ್ಮನವರ ತ್ಯಾಗವೂ ಇತ್ತು. ಜೀವನದುದ್ದಕ್ಕೂ ಜೊತೆ ಜೊತೆಯಾಗಿ ನಡೆದ ಚೆನ್ನಮ್ಮ, ಇದೀಗ ದೇವೇಗೌಡರನ್ನ ಒಂಟಿಯಾಗಿಸಿದ್ದಾರೆ.


ಮಾಜಿ ಪ್ರಧಾನಿ ದೇವೇಗೌಡರ ಅಪರೂಪದ ದಾಂಪತ್ಯದ ಪಯಣದ ಸುದೀರ್ಘ ಕೊಂಡಿ ಕಳಚಿದೆ. 7 ದಶಕಗಳ ಜೊತೆಗಾತಿ ಒಲ್ಲದ ಮನಸ್ಸಲ್ಲಿ ಮರೆಯಾಗಿದ್ದಾರೆ. 89ನೇ ವಯಸ್ಸಲ್ಲಿ ಚೆನ್ನಮ್ಮ ತಮ್ಮ ಜೀವನಯಾನ ಮುಗಿಸಿದ್ದಾರೆ. ಪತಿ ದೇವೇಗೌಡರ ಮುಖ ದಿಟ್ಟಿಸಿ ನೋಡುತ್ತಲೇ ಕೊನೆಯುಸಿರೆಳೆದಿದ್ದಾರೆ. ಕಳೆದ 4 ದಿನಗಳಿಂದ ಚೆನ್ನಮ್ಮ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೀತಿದ್ರು. ಐಸಿಯುನಲ್ಲಿ ಸಾವು-ಬದುಕಿನ ಮಧ್ಯೆ ಹೋರಾಟ ನಡೆಸಿದ್ರು. ವೈದ್ಯರು ಅದೆಷ್ಟೇ ಪ್ರಯತ್ನ ಪಟ್ರೂ ಪ್ರಯೋಜನ ಆಗಲಿಲ್ಲ.

ದೇವೇಗೌಡರ ದಂಪತಿ ನಡುವಿನ ಪ್ರೀತಿ ಎಂಥದ್ದು ಅನ್ನೋದಕ್ಕೆ ಇಡೀ ಪ್ರಪಂಚವೇ ಸಾಕ್ಷಿಯಾಗಿದೆ. ಒಟ್ಟೊಟ್ಟಿಗೆ ಪಯಣ ಮಾಡೋ ಅದೆಷ್ಟೋ ಕನಸು ಬಾಡಿರಲಿಲ್ಲ. ಪತ್ನಿಯನ್ನ ಕಳಿಸಿ ಕೊಡಲು ಗೌಡರು ತಯಾರಿರಲಿಲ್ಲ. ಆದ್ರೆ ಯಾವಾಗ ಪತ್ನಿ ಬದುಕಲ್ಲ ಅನ್ನೋದು ಗೊತ್ತಾಯ್ತೋ, ಗೌಡ್ರು ಅತ್ಯಂತ ಭಾವುಕರಾಗಿ ಬಿಳ್ಕೊಡುಗೆ ಕೊಟ್ಟಿದ್ದಾರೆ. ಮುತ್ತೈದೆಯಾಗಿಯೇ ಬಾಳ್ಬೇಕು. ಕಟ್ಕೊಂಡ್ ಗಂಡನ ಎದುರೇ ಜೀವ ಬಿಡ್ಬೇಕು ಅನ್ನೋ ಆಸೆ ಈಡೇರಿಸಿದ್ದಾರೆ. ಕೊನೆಯ ಕ್ಷಣದಲ್ಲಿ ಪತ್ನಿ ಹಣೆಗೆ ಕುಂಕುಮ ಇಟ್ಟು, ತಲೆಗೆ ಹೂ ಮುಡಿಸಿದ್ರು. ಇದೇ ವೇಳೆ ಚೆನ್ನಮ್ಮನ ಮುಖವನ್ನೇ ದಿಟ್ಟಿಸಿ ನೋಡಿ ದೇವೇಗೌಡ್ರು ಕಣ್ಣೀರಿಟ್ಟಿದ್ರು.

### ಕೊನೆಯವರೆಗೂ ಬಿಡದ ಪತಿ ಭಕ್ತಿ

**ಚೆನ್ನಮ್ಮನವರಿಗೆ ಹಣ್ಣು ತಿನ್ನಲು ಸ್ವಲ್ಪ ಕಷ್ಟವಾದಾಗ, ದೇವೇಗೌಡರು ತಾವೇ ಕೈಯಿಂದ ಸಹಾಯ ಮಾಡುತ್ತಾರೆ. ಆದರೆ, ಅಷ್ಟೊಂದು ಅಶಕ್ತತೆಯಲ್ಲೂ ಚೆನ್ನಮ್ಮನವರಿಗೆ ಪತಿಯ ಮೇಲಿನ ಕಾಳಜಿ ಮಾತ್ರ ಕಿಂಚಿತ್ತೂ ಕಡಿಮೆಯಾಗಿರಲಿಲ್ಲ. ದೇವೇಗೌಡರ ಪಂಚೆಯ ಮೇಲೆ ಬಿದ್ದಿದ್ದ ಸಣ್ಣ ದೂಳು ಅಥವಾ ಆಹಾರದ ಕಣವನ್ನು ಕಂಡ ತಕ್ಷಣ, ತಮ್ಮ ನಡುಗುವ ಕೈಗಳಿಂದಲೇ ಅದನ್ನು ಸವರುತ್ತಾ ಕ್ಲೀನ್ ಮಾಡುತ್ತಾರೆ. ಜೀವನದುದ್ದಕ್ಕೂ ಪತಿಯನ್ನು ಅಚ್ಚುಕಟ್ಟಾಗಿ ನೋಡಿಕೊಂಡ ಆ ತಾಯಿಯ ಗುಣಕ್ಕೆ ಬೆಲೆ ಕಟ್ಟಲು ಸಾಧ್ಯವೇ?**





### ಎರಡು ಬಾರಿ ಸಾವನ್ನು ಗೆದ್ದು ಬಂದಿದ್ದ ಚನ್ನಮ್ಮ

**ಯಶಸ್ವಿ ಪುರುಷನ ಹಿಂದೆ ಮಹಿಳೆ ಇದ್ದೇ ಇರುತ್ತಾಳೆ ಎನ್ನುತ್ತಾರೆ. ದೇವೇಗೌಡರ ಪ್ರತಿ ಯಶಸ್ಸಿನ ಹಿಂದೆ ನಿಂತಿದ್ದವರು. ಅವರ ಕುಟುಂಬ ಸದಸ್ಯರು ಸೋತಾಗ ಕುಗ್ಗಲಿಲ್ಲ, ಗೆದ್ದಾಗ ಹಿಗ್ಗಲಿಲ್ಲ. ರಾಜಕೀಯದ ಏಳು-ಬೀಳುಗಳಲ್ಲಿ ದೇವೇಗೌಡರಿಗೆ ಬೆನ್ನೆಲುಬಾಗಿ ನಿಂತವರು ಎಂದು ಸಿಎಂ ಶಿವಕುಮಾರ್ ಅವರು ಹೇಳಿದ್ದಾರೆ. ಚೆನ್ನಮ್ಮ ಅವರು ಮನೆಯನ್ನು ಜವಾಬ್ದಾರಿಯಿಂದ ನೋಡಿ ಕೊಳ್ಳುವ ಮೂಲಕ ಅವರು ಗೌಡರ ಬದುಕಿನ ನಿಜವಾದ ಶಕ್ತಿಯಾಗಿದ್ದರು. ಮೌನದಿಂದಲೇ ಇಡೀ ಕುಟುಂಬದ ನಿರ್ವಹಣೆ ಮಾಡಿದವರು. ಯಾವುದೇ ಪ್ರಚಾರ ಬಯಸದೆ, ತೆರೆಮರೆಯಲ್ಲಿ ಇದ್ದು ದೇವೇಗೌಡದ ಯಶಸ್ವಿಗೆ ಸಾಕ್ಷಿಯಾದರು. ಚೆನ್ನಮ್ಮ ಎರಡು ಬಾರಿ ಸಾವನ್ನೇ ಗೆದ್ದು ಬದ್ದಿದ್ದರು. ತಮ್ಮ ಮೇಲೆ ಆಸಿಡ್ ದಾಳಿ ಮಾಡಿದವನನ್ನೇ ಕ್ಷಮಿಸಿದ್ದರು.**

**ಅಂತ್ಯಕ್ರಿಯೆ ಬಗ್ಗೆ ಇಂಚಿಂಚು ಮಾಹಿತಿ ಪಡೆದ ದೇವೇಗೌಡ್ರು**

ಚೆನ್ನಮ್ಮ ಅಂತ್ಯಕ್ರಿಯೆ ಹಿನ್ನೆಲೆ ದೇವೇಗೌಡರು ಮಾವಿನಕೆರೆ ಶ್ರೀರಂಗನಾಥಸ್ವಾಮಿ ಬೆಟ್ಟದ ತಪ್ಪಲು ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪುತ್ರಿ ಶೈಲಜಾ ಮತ್ತು ಪುತ್ರ ಹೆಚ್‌ಡಿ ರೇವಣ್ಣ ಅವರ ಜೊತೆ ಆಗಮಿಸಿದ್ದ ದೇವೇಗೌಡ್ರು, ಅಂತ್ಯಕ್ರಿಯೆ ಬಗ್ಗೆ ಇಂಚಿಂಚು ಮಾಹಿತಿ ಪಡೆದ್ರು. ಬಳಿಕ ಪುರೋಹಿತರನ್ನು ಕರೆದ ದೇವೇಗೌಡರು, ಅಂತ್ಯಕ್ರಿಯೆ ವಿಧಿ -ವಿಧಾನಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

**ಪುತ್ರನ ಬಳಿ ದೇವೇಗೌಡರ ಬೇಡಿಕೆ**

ನಂತರ, ರಂಗನಾಥಸ್ವಾಮಿ ದೇವಸ್ಥಾನದಿಂದ ಪೂಜೆ, ಅಭಿಷೇಕ ಮಾಡಿಸಿ ಹರದನಹಳ್ಳಿ ಶಿವನ ದೇವಸ್ಥಾನಕ್ಕೂ ಅಭಿಷೇಕ ಮಾಡಿಸಿ ಜೊತೆಗೆ ಎಲ್ಲ ದೇವರ ಆಂಜನೇಯ ಸ್ವಾಮಿ ದೇವಸ್ಥಾನದ ತೀರ್ಥ ತಂದು ಚನ್ನಮ್ಮನ ಪಾರ್ಥಿವ ಶರೀರಕ್ಕೆ ಪ್ರೋಕ್ಷಣೆ ಮಾಡಿ, ಜೊತೆಗೆ ಮೊದಲು ನಾನು ಚನ್ನಮ್ಮ ಇಬ್ಬರು ಹೊಳೆ ನರಸೀಪುರದಲ್ಲಿ ಬಾಡಿಗೆ ಮನೆಯಲ್ಲಿ ಇದ್ವಿ, ಆ ಮನೆಯ ಮುಖಾಂತರ ಮೆರವಣಿಗೆ ಹೋಗಬೇಕು. ಅಲ್ಲಿಂದ 10 ನಿಮಿಷ ನಿಂತು ನಂತರ ಅಂತ್ಯಕ್ರಿಯೆ ಜಾಗಕ್ಕೆ ತನ್ನಿ ಎಂದು ಪುತ್ರ ಹೆಚ್‌ಡಿ ರೇವಣ್ಣ ಜೊತೆ ಮಾತನಾಡಿದರು.

**ಆಸಿಡ್ ದಾಳಿಗೆ ತುತ್ತಾಗಿದ್ದ ಚನ್ನಮ್ಮ**

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಧರ್ಮಪತ್ನಿಯಾಗಿದ್ದ ಚನ್ನಮ್ಮ ಅವರ ಮೇಲೆ 2001ರ ಫೆಬ್ರವರಿ 21ರಂದು ಆಸಿಡ್ ದಾಳಿ ನಡೆದಿತ್ತು. ಆ ಘಟನೆ ಈಗ ಭರ್ತಿ 25 ವರ್ಷಗಳು ಕಳೆದಿವೆ. ಕರಾಳ ದಿನದ ಆಘಾತಕಾರಿ ರಾಜಕೀಯ ಮತ್ತು ಕೌಟುಂಬಿಕ ರಹಸ್ಯಗಳನ್ನು ಹೆಚ್.ಡಿ. ದೇವೇಗೌಡರು ಈ ಹಿಂದೆ ಖಾಸಗಿ ವಾಹಿನಿಯ ಸಾಧಕರ ಸೀಟಿನಲ್ಲಿ ಕುಳಿತು ಜಗತ್ತಿನ ಮುಂದೆ ಮೊದಲ ಬಾರಿಗೆ ಬಹಿರಂಗಪಡಿಸಿದ್ದರು.

ಹರದನಹಳ್ಳಿಯ ಈಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸುತ್ತಿದ್ದಾಗ, ದೇವೇಗೌಡರ ತಮ್ಮನ ಮಗ ಲೋಕೇಶ್ ಎಂಬಾತ ಈ ಕೃತ್ಯ ಎಸಗಿದ್ದನು. ಈ ಘಟನೆಯಲ್ಲಿ ಚೆನ್ನಮ್ಮ ಮತ್ತು ಸೊಸೆ ಭವಾನಿ ರೇವಣ್ಣ ಗಂಭೀರವಾಗಿ ಗಾಯಗೊಂಡಿದ್ದರು. ದೈವಭಕ್ತರಾದ ದೇವೇಗೌಡರ ಕುಟುಂಬಕ್ಕೆ ಹರದನಹಳ್ಳಿಯ ದೇವೇಶ್ವರಸ್ವಾಮಿ ಮನೆದೇವರು. ದೇವೇಗೌಡರ ಕುಟುಂಬ ಪ್ರತಿ ವರ್ಷ ಶಿವರಾತ್ರಿಯಂದು ಇಲ್ಲಿ ಪೂಜೆ ಸಲ್ಲಿಸುತ್ತದೆ. ಅದರಂತೆ 2001ರ ಫೆಬ್ರವರಿ 21ರಂದು ಮನೆ ದೇವರಿಗೆ ಪೂಜೆ ಸಲ್ಲಿಸಲು ಹೋದಾಗ ಈ ಆಘಾತಕಾರಿ ಘಟನೆ ಇಡೀ ಕುಟುಂಬವನ್ನು ನಡುಗಿಸಿತ್ತು.

**ರಾಜಕೀಯ ಪಿತೂರಿ ಹಾಗೂ ಕೌಟುಂಬಿಕ ಕಲಹದಿಂದ ದಾಳಿ**

ದೇವೇಗೌಡರು ತಮ್ಮ ಬಿಡುವಿಲ್ಲದ ಕಾರ್ಯದಲ್ಲಿ ನಿರತರಾಗಿದ್ದರಿಂದ ಚೆನ್ನಮ್ಮ ಅವರು ಪುತ್ರ ರೇವಣ್ಣ ಹಾಗೂ ಸೊಸೆ ಭವಾನಿ ರೇವಣ್ಣ ಅವರೊಂದಿಗೆ ದೇವಸ್ಥಾನಕ್ಕೆ ಬಂದಿದ್ದರು. ಪೂಜೆಯಲ್ಲಿದ್ದಾಗ ದೇವೇಗೌಡರ ಸಹೋದರ ಬಸವೇಗೌಡರ ಪುತ್ರ ಲೋಕೇಶ್ ಎಂಬಾತ ಪೂಜೆಯ ನೆಪದಲ್ಲಿ ಬಂದು ಚೆನ್ನಮ್ಮ ಅವರ ಮೇಲೆ ಆಸಿಡ್ ದಾಳಿ ನಡೆಸಿದ್ದ ಎನ್ನಲಾಗಿತ್ತು. ಈ ಘಟನೆಯಲ್ಲಿ ಚೆನ್ನಮ್ಮ ಅವರ ಮುಖ, ತಲೆಗೆ ಗಂಭೀರ ಗಾಯಗಳಾಗಿದ್ದರೆ, ಭವಾನಿ ರೇವಣ್ಣ ಅವರ ಕೈಗೂ ಗಾಯವಾಗಿತ್ತು. ಪ್ರಾಣಾಪಾಯದಿಂದ ಪಾರಾದ ಈ ಘಟನೆ ರಾಜಕೀಯ ಪಿತೂರಿ ಹಾಗೂ ಕೌಟುಂಬಿಕ ಕಲಹದ ಚರ್ಚೆಗೆ ಗ್ರಾಸವಾಗಿತ್ತು.

ವಾಸ್ತವವಾಗಿ ಅವರ ಸಂಚು ಇದ್ದದ್ದು ನನ್ನ ಮಗ ಹೆಚ್.ಡಿ. ರೇವಣ್ಣನ ಮೇಲೆ ಆಸಿಡ್ ಹಾಕುವುದಾಗಿತ್ತು. ನಾವೆಲ್ಲ ಮಹಾದೇಶ್ವರ ಬೆಟ್ಟಕ್ಕೆ ಹೋದಾಗ ರೇವಣ್ಣ ಬಂದಿರಲಿಲ್ಲ, ಹೀಗಾಗಿ ನನ್ನ ಪತ್ನಿ ಮತ್ತು ಸೊಸೆಯ ಮೇಲೆ ದಾಳಿ ನಡೆಯಿತು ಎಂಬ ಮಾಹಿತಿಯನ್ನು ದೇವೇಗೌಡರು ಹಂಚಿಕೊಂಡಿದ್ದರು.

ಆಸಿಡ್ ಎರಚಿದ ಪ್ರಕರಣದಲ್ಲಿ ಲೋಕೇಶ್ ಅಪರಾಧಿ ಎಂದು ಸಾಬೀತಾಗಿ ನ್ಯಾಯಾಲಯವು ಆತನಿಗೆ 8 ವರ್ಷಗಳ ಕಠಿಣ ಜೈಲು ಶಿಕ್ಷೆಯನ್ನು ವಿಧಿಸಿತ್ತು. ಲೋಕೇಶ್ ಜೈಲು ಸೇರಿ ಇನ್ನೂ 4 ವರ್ಷಗಳ ಶಿಕ್ಷೆ ಬಾಕಿ ಇತ್ತು. ಈ ಮಧ್ಯೆ, ದೇವೇಗೌಡರ ತಮ್ಮನಿಗೆ ಕ್ಯಾನ್ಸರ್ ಇರುವುದು ಗೊತ್ತಾಗಿ ಆ ಕಷ್ಟದ ಸ್ಥಿತಿಯನ್ನು ಕಂಡು ಮರುಗಿದ ಹೆಚ್.ಡಿ. ದೇವೇಗೌಡರು ಲೋಕೇಶ್‌ನ್ನು ಜೈಲಿನಿಂದ ಬಿಡಿಸಿದ್ದರು. ತಮ್ಮ ಜೀವನದ ಅತ್ಯಂತ ಕಠಿಣ ಸಂದರ್ಭದಲ್ಲೂ ಪತ್ನಿ ಚೆನ್ನಮ್ಮ ತೋರಿದ ಸಹನೆ ಮತ್ತು ತ್ಯಾಗವನ್ನು ದೇವೇಗೌಡರು ಮುಕ್ತಕಂಠದಿಂದ ಶ್ಲಾಘಿಸಿದ್ದರು. ತಮ್ಮ ಮೇಲೆ ಆಸಿಡ್ ಹಾಕಿ ವಿಕಾರಗೊಳಿಸಿದ ಅಪರಾಧಿಯನ್ನು ಪತಿ ಗೌಡರು ಜೈಲಿನಿಂದ ಬಿಡಿಸಿದಾಗಲೂ ಚೆನ್ನಮ್ಮ ಅವರು ಯಾವುದೇ ಬೇಸರ ಮಾಡಿಕೊಳ್ಳಲಿಲ್ಲ ಎಂದಿದ್ದರು.

ಚೆನ್ನಮ್ಮ ಸುಮಾರು 2 ತಿಂಗಳ ಕಾಲ ಆಸ್ಪತ್ರೆಯಲ್ಲಿದ್ದು, ಸಾವು-ಬದುಕಿನ ನಡುವೆ ಹೋರಾಡಿ ಚೇತರಿಸಿಕೊಂಡಿದ್ದರು. ಆಸಿಡ್‌ನಿಂದ ಗಾಯಗೊಂಡಿದ್ದರೂ ಅವರು ಅತ್ಯಂತ ಧೈರ್ಯದಿಂದ ಜೀವನ ನಡೆಸಿದರು.

**ಕೊರೋನಾ ಸೋಂಕಿನಿಂದ ಸಾಯುವ ಹಂತಕ್ಕೆ ತಲುಪಿದ್ದ ಚೆನ್ನಮ್ಮ**

ಜಗತ್ತನ್ನೇ ಕಾಡಿದ ಮಹಾಮಾರಿ ಕೊರೋನಾ ಸೋಂಕಿಗೂ ಚೆನ್ನಮ್ಮ ಅವರು ತುತ್ತಾಗಿದ್ದರು. 2024-2025 ರಲ್ಲಿ ಎದೆ ಸಂಬಂಧಿತ ಸಮಸ್ಯೆ ಮತ್ತು ಉಸಿರಾಟದ ತೊಂದರೆಯಿಂದಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಹೀಗೆ ಹಲವು ಅಪಾಯಗಳಿಂದ ಪಾರಾಗಿ ಬಂದಿದ್ದ ಚೆನ್ನಮ್ಮ ಮೊನ್ನೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಪತ್ನಿಯ ಅಗಲಿಕೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕಂಬನಿ ಮಿಡಿದಿದ್ದಾರೆ.

ಅವರು ಬಿಟ್ಟುಹೋದ ಸರಳತೆ, ಮಾನವೀಯತೆ, ದಾನಶೀಲತೆ, ಆತಿಥ್ಯ ಮತ್ತು ಪ್ರೀತಿಯ ಮೌಲ್ಯಗಳು ಮುಂದಿನ ತಲೆಮಾರುಗಳಿಗೆ ಸದಾ ಪ್ರೇರಣೆಯಾಗಿರಲಿ.

### ಹೃದಯ ಹಿಂಡುವ ನಮಸ್ಕಾರ!

- ಈ ಎಲ್ಲದಕ್ಕಿಂತ ಹೆಚ್ಚಾಗಿ ನೋಡುಗರ ಎದೆಯಲ್ಲಿ ಭಾರವಾಗುವುದು ವಿಡಿಯೋದ ಕೊನೆಯ ಕ್ಷಣ. ತಾವು ಕುಳಿತಿದ್ದ ವೀಲ್ ಚೇರ್‌ನಿಂದಲೇ ಬಾಗಿ, ಪತಿ ದೇವೇಗೌಡರ ಕಾಲುಗಳನ್ನ ಮುಟ್ಟಿ ಚೆನ್ನಮ್ಮ ನಮಸ್ಕರಿಸುತ್ತಾರೆ. ಬಹುಶಃ ಆ ತಾಯಿಗೆ ತಾನು ಮರೆಯಾಗುತ್ತೇನೆ ಎಂಬ ಸಣ್ಣ ಸುಳಿವು ಸಿಕ್ಕಿತ್ತೇನೋ? ಅಥವಾ ಮುಂದಿನ ಜನ್ಮದಲ್ಲೂ ನೀವೇ ಪತಿಯಾಗಿ ಸಿಗಲಿ ಎಂಬ ಮೌನ ಪ್ರಾರ್ಥನೆಯೋ? ಆ ಪಾದ ನಮಸ್ಕಾರದ ದೃಶ್ಯ ಈಗ ಎಂಥವರ ಕಣ್ಣಲ್ಲೂ ನೀರು ತರಿಸುತ್ತಿದೆ.

### ಹೋಗಿ ಬನ್ನಿ ಚನ್ನಮ್ಮ.. ನಿಮ್ಮ ಈ ಪ್ರೀತಿ ಎಂದಿಗೂ ಅಮರ..

- ಚೆನ್ನಮ್ಮ ಅವರು ಈಗ ಇಲ್ಲದಿರಬಹುದು. ಆದರೆ, ವೀಲ್ ಚೇರ್ ಮೇಲೆ ಕುಳಿತು ಒಬ್ಬರಿಗೊಬ್ಬರು ಸಾಂತ್ವನ ನೀಡಿದ, ಪರಸ್ಪರರ ಕೈಹಿಡಿದು ಬೆಚ್ಚಗೆ ಸವರಿದ ಈ ದೃಶ್ಯಗಳು ಮಾತ್ರ ಇತಿಹಾಸದಲ್ಲಿ ಉಳಿಯಲಿವೆ. ರಾಜಕೀಯದ ಏಳು-ಬೀಳುಗಳ ನಡುವೆ, ಪ್ರೀತಿ ಮತ್ತು ನಿಷ್ಠೆಯ ಸುಂದರ ಕಾವ್ಯದಂತೆ ಬದುಕಿದ ಈ ದಂಪತಿಗಳಿಗೆ ಇಡೀ ನಾಡು ಇಂದು ಕಣ್ಣೀರಿನ ವಿದಾಯ ಕೋರುತ್ತಿದೆ.











# ಕರಗದ ಸಂಜೆ

ಉತ್ತರ ಭಾರತದ ಆ ಕೇಂದ್ರ ಸರ್ಕಾರದ ವಸತಿಗೃಹಗಳ ಮಧ್ಯದಲ್ಲಿದ್ದ ಆಟದ ಮೈದಾನವು, ವಿವಿಧ ರಾಜ್ಯಗಳಿಂದ ಬಂದು ನೆಲೆಸಿದ್ದ ಜನಾಂಗಕ್ಕೆ ಒಂದು ಹಳ್ಳಿಯ ರಂಗಸ್ಥಳದಂತಿತ್ತಲ್ಲದೆ, ದಿನದ ಬಹುಪಾಲು ಸಮಯ ಅದು ಆ ಕಾಲೋನಿಯ ಹಿರಿಯ ಹುಡುಗರ ನಿರಂಕುಶ ಸಾಮ್ರಾಜ್ಯವೇ ಆಗಿರುತ್ತಿತ್ತು. ಸಂಜೆಯಾಗುತ್ತಿದ್ದಂತೆ ಅವರು ಬಂದು ಫುಟ್ ಬಾಲ್ ಆಡುತ್ತಾ ಇಡೀ ಮೈದಾನವನ್ನು ಆಕ್ರಮಿಸಿಕೊಳ್ಳುತ್ತಿದ್ದರು. ವೆಂಕಟ ಮತ್ತು ಅವನ ಗೆಳೆಯರಿಗೆ ಆ ಆಟದಲ್ಲಿ ಕೇವಲ ಅಂಚಿನ ಪಾತ್ರವಷ್ಟೇ ಸಿಗುತ್ತಿತ್ತು. ಹಿರಿಯರು ನೀಡುತ್ತಿದ್ದ ಒಂದೆರಡು ಫುಟ್‌ಬಾಲ್ ಪಾಸ್‌ಗಳನ್ನು ಪಡೆಯಲು ಅವರು ಮೈದಾನದಾದ್ಯಂತ ಹೆಣಗಾಡಬೇಕಿತ್ತೇ ಹೊರತು, ಆಟ ಯಾವಾಗಲೂ ಅವರಿಲ್ಲದೆಯೇ ನಡೆದುಹೋಗುತ್ತಿತ್ತು.



ಆದರೆ ಆ ದಿನದ ಸಂಜೆಗೆ ಮಳೆ ಬೇರೆಯದೇ ಆದ ಸಂಕಲ್ಪ ತೊಟ್ಟಿತ್ತು.

ಮಧ್ಯಾಹ್ನದಿಂದಲೂ ಮುಸಲಧಾರೆ ಸುರಿಯುತ್ತಿತ್ತು. ವೆಂಕಟ ಕಿಟಕಿಯ ಬಳಿ ನಿಂತು, ಮಳೆಯ ಮರೆಯಲ್ಲಿ ಸಂಪೂರ್ಣವಾಗಿ ಶೂನ್ಯವಾಗಿದ್ದ ಆ ವಿಶಾಲವಾದ ಮೈದಾನವನ್ನು ನೋಡುತ್ತಿದ್ದ. ಹಿರಿಯ ಹುಡುಗರ ಆರ್ಭಟದ ಯಾವೊಂದು ಕುರುಹೂ ಅಲ್ಲಿರಲಿಲ್ಲ.

ಅಷ್ಟರಲ್ಲಿ ಕೆಳಗಿನಿಂದ, ವೆಂಕಟಾ! ಎಂಬ ಮನೋಜಿನ ಪರಿಚಿತ ಕೂಗು ಕೇಳಿಸಿತು.

ಅವನು ಇಣುಕಿದಾಗ ಮಳೆಯಲ್ಲಿ ನೆನೆದು ನಿಂತಿದ್ದ ಮನೋಜ್ ಮತ್ತು ಚಟರ್ಜಿ ಕಂಡರು. ಮನೋಜಿನ ಕಂಕುಳಲ್ಲಿದ್ದ ಆ ಹಳೆಯ ಚರ್ಮದ ಫುಟ್‌ಬಾಲ್, ಆ ಕ್ಷಣದ ದೀಕ್ಷೆಯಂತೆ ಕಾಣುತ್ತಿತ್ತು.

ಇಂತಾ ಮಳೇಲಾ? ವೆಂಕಟ ನಕ್ಕು ಕೇಳಿದ.

ಹೌದು, ಈ ಮಳೆಯೇ ನಮಗಾಗಿ ಬಂದದ್ದು! ನೋಡು, ಇಡೀ ಮೈದಾನ ನಮಗಾಗಿ ಕಾಯ್ತಿದೆ! ಎಂದು ಚಟರ್ಜಿ ಖಾಲಿ ಮೈದಾನದ ಕಡೆಗೆ ಕೈತೋರಿಸಿದಾಗ, ಮನೋಜ್, ಸಂಜು ಮತ್ತು ಮಧು ಬರ್ತಿದ್ದಾರೆ, ಹೋಗೋ ದಾರಿಯಲ್ಲಿ ನವೀನ್ನನ್ನೂ ಕರ್ಕೊಂಡು ಬರೋಣ, ಎಂದ.

ಯಾವ ಹಿರಿಯ ಹುಡುಗರೂ ಇಲ್ಲದೆ, ಕಾಯುವ ಆತಂಕವಿಲ್ಲದೆ ತನಗಾಗಿ ಕಾಯುತ್ತಿದ್ದ ಆ ನಿರ್ಜನ ಮೈದಾನವನ್ನು ವೆಂಕಟ ಒಂದು ಕ್ಷಣ ದಿಟ್ಟಿಸಿದ. ಆ ತೀರ್ಮಾನಕ್ಕೆ ಒಂದು ಕ್ಷಣವೂ ಬೇಕಾಗಲಿಲ್ಲ.

ಎರಡು ನಿಮಿಷ! ಎಂದು ಕೂಗಿ ಅವನು ಕಿಟಕಿಯಿಂದ ಮಾಯವಾದ.

ಆರು ಜನ ಹುಡುಗರು ಮೈದಾನಕ್ಕೆ ಬಂದ ತಕ್ಷಣವೇ ಆಟ ಆರಂಭವಾಯಿತು. ಒಂದು ಕಡೆ ವೆಂಕಟ, ಮನೋಜ್ ಮತ್ತು ನವೀನ್, ಇನ್ನೊಂದು ಕಡೆ ಸಂಜು, ಮಧು ಮತ್ತು ಚಟರ್ಜಿ ಸೇರಿದಾಗ ಆ ರಂಗಸ್ಥಳ ಈಗ ಸಂಪೂರ್ಣವಾಗಿ ಅವರದಾಗಿತ್ತು.

ಅಲ್ಲಿ ಯಾರೂ ತಮ್ಮ ಸರದಿಗಾಗಿ ಕಾಯಬೇಕಾಗಿರಲಿಲ್ಲ ಮತ್ತು ತಮಗಿಂತ ದುಪ್ಪಟ್ಟು ಗಾತ್ರದ ಹುಡುಗರ ಹಿಂದೆ ಓಡಬೇಕಾಗಿರಲಿಲ್ಲ. ಪ್ರತಿಯೊಂದು ಪಾಸ್ ಕೂಡ ಮುಖ್ಯವಾಗಿತ್ತು, ಏಕೆಂದರೆ ಅಲ್ಲಿ ಪ್ರತಿಯೊಬ್ಬ ಆಟಗಾರನೂ ಅಷ್ಟೇ ಮುಖ್ಯನಾಗಿದ್ದ. ವೆಂಕಟ ತನ್ನ ಇಡೀ ವಾರದಲ್ಲಿ ಆಡದಷ್ಟು ಮುಕ್ತವಾಗಿ ಚೆಂಡನ್ನು ನಿಯಂತ್ರಿಸುವ ಕಲೆಯನ್ನು ಆ ಮೊದಲ ಹತ್ತು ನಿಮಿಷಗಳಲ್ಲೇ ಪ್ರದರ್ಶಿಸಿ ಮುಗಿಸಿದ.

ನವೀನ್ ಮೊದಲ ಗೋಲು ಹೊಡೆದಾಗ, ಜಗತ್ತನ್ನೇ ಗೆದ್ದ ಉನ್ಮಾದದಲ್ಲಿ ಮಳೆಯಲ್ಲಿ ನೃತ್ಯ ಮಾಡಿದ. ಚೆಂಡು ಗೆರೆ ದಾಟಿ ಹೋಗಿದ್ದು ಸರಿಯಲ್ಲ ಎಂದು ಸಂಜು ವಾದಿಸಿದನಾದರೂ, ಆ ಮುಗ್ಧ ಜಗಳವನ್ನು ಕೇಳುವ ತಾಳ್ಮೆ ಆ ಕ್ಷಣದಲ್ಲಿ ಯಾರಿಗೂ ಇರಲಿಲ್ಲ. ಮಧು ನೀರಿನ ಹಳ್ಳವೊಂದರ ಮೇಲೆ ಎಷ್ಟು ವೇಗವಾಗಿ ಓಡಿದನೆಂದರೆ, ಅವನು ಜಾರಿ ಬಿದ್ದು ಅಕಸ್ಮಾತ್ ಆಗಿ ಚಟರ್ಜಿಯನ್ನು ತಡೆದಾಗ ಇಬ್ಬರೂ ಮಣ್ಣಿನಲ್ಲೇ ಬಿದ್ದು ಜೋರಾಗಿ ನಗಲಾರಂಭಿಸಿದರು.

ಹುಡುಗರು ಅಂಗಿ ಬೆನ್ನಿಗೆ ಅಂಟಿಕೊಂಡು, ಚಡ್ಡಿಗಳು ಮಣ್ಣಿನ ಗೆರೆಗಳಿಂದ ಕಂಗೊಳಿಸುತ್ತಿದ್ದರೂ ಯಾರಿಗೂ ಮಳೆಯ ಚಳಿಯ ಅರಿವಿರಲಿಲ್ಲ. ಆ ಹಸಿರು ಮೈದಾನವು ಈಗ ಮೃದುವಾದ, ಜಾರುವ ಕ್ರೀಡಾಂಗಣವಾಗಿ ಮಾರ್ಪಟ್ಟಿತ್ತು. ಪ್ರತಿ ಓಟಕ್ಕೂ ನೀರು ಚಿಮ್ಮುತ್ತಿತ್ತು ಮತ್ತು ಪ್ರತಿ ಬಿದ್ದಾಗಲೂ ನಗು ಉಕ್ಕುತ್ತಿತ್ತು. ಆಟದ ನಡುವೆ ಅವರು ಫಲಿತಾಂಶ ಏನಾಗಬಹುದು ಎಂಬುದನ್ನು ಸಂಪೂರ್ಣವಾಗಿ ಮರೆತುಬಿಟ್ಟರು.

ಕತ್ತಲು ಆವರಿಸುತ್ತಿದ್ದಂತೆ ಸುತ್ತಲಿನ ಮನೆಗಳಲ್ಲಿ ಒಂದೊಂದಾಗಿ ದೀಪಗಳು ಉರಿಯತೊಡಗಿದವು. ಅಡುಗೆಮನೆಯ ಕಿಟಕಿಗಳಿಂದ ಪಾತ್ರೆಗಳ ಸೀಟಿ ಸದ್ದು ಕೇಳಿಸುತ್ತಿದ್ದಾಗ, ಬಿಸಿಯಡುಗೆಯ ಸುವಾಸನೆಯು ಆ ಒದ್ದೆಯಾದ ಗಾಳಿಯಲ್ಲಿ ತೇಲಿಬರತೊಡಗಿತು.

ಮನಸ್ಸಿಲ್ಲದ ಮನಸ್ಸಿನಿಂದ ಹುಡುಗರು ಆಟ ನಿಲ್ಲಿಸಿ, ಆ ಮಳೆಯಲ್ಲಿಯೇ ಒಬ್ಬರನ್ನೊಬ್ಬರು ನೋಡುತ್ತಾ ಜೋರಾಗಿ ಉಸಿರಾಡುತ್ತಾ ನಿಂತರು. ಈ ವರ್ಷದ ಅತ್ಯುತ್ತಮ ಆಟ ಇದು, ಎಂದು ಸಂಜು ಘೋಷಿಸಿದ್ದನ್ನು ಯಾರೂ ನಿರಾಕರಿಸಲಿಲ್ಲ.

ಆದರೆ ಮನೆಗೆ ಹಿಂದಿರುಗುವ ಹಾದಿಯಲ್ಲಿ ವೆಂಕಟನ ಮನಸ್ಸಿನಲ್ಲಿ ಆತಂಕ ಶುರುವಾಯಿತು. ಅವನ ಬಟ್ಟೆಯೆಲ್ಲಾ ಕೆಸರಾಗಿ, ಕಾಲುಗಳು ಕಾಲುವೆ ತೋಡಿ ಬಂದಂತೆ ಕಾಣುತ್ತಿದ್ದರಿಂದ ಅಮ್ಮ ಖಂಡಿತವಾಗಿಯೂ ಬೈಯುತ್ತಾಳೆ ಎಂದುಕೊಂಡು, ಅವನು ಮನಸ್ಸಿನಲ್ಲೇ ಹಲವು ಕ್ಷಮಾಪಣೆಗಳನ್ನು ಸಿದ್ಧಪಡಿಸಿಕೊಂಡಿದ್ದ.

ಅವನು ಬಾಗಿಲನ್ನು ಮೆಲ್ಲಗೆ ತಳ್ಳಿ ಒಳಬಂದಾಗ ಅಡುಗೆಮನೆಯಿಂದ ಅಮ್ಮ ಹೊರಗೆ ಬಂದಳು. ಶರ್ಟಿನ ಮೇಲೆ ಕೆಸರು, ಮುಖದ ಮೇಲೆ ಜೇಡಿಮಣ್ಣಿನ ಕಲೆಗಳಿದ್ದ ಅವನ ಅವತಾರವನ್ನು ಅವಳು ಕೆಲವು ಕ್ಷಣಗಳ ಕಾಲ ಮೌನವಾಗಿ ದಿಟ್ಟಿಸಿ ನೋಡಿದಳು. ವೆಂಕಟ ಬೈಗುಳವನ್ನು ಎದುರಿಸಲು ಸಿದ್ಧನಾಗಿ ಕಣ್ಣು ಮುಚ್ಚಿದ.

ಆದರೆ ಅಲ್ಲಿ ಕೇಳಿಸಿದ್ದು ಬೈಗುಳವಾಗಿರಲಿಲ್ಲ. ಅಮ್ಮನ ಮುಖದಲ್ಲಿ ಅಪರೂಪದ ಮುಗುಳ್ನಗೆಯಿತ್ತು. ಅವಳು ಹತ್ತಿರ ಬಂದು, ಆಡಂಬರವಿಲ್ಲದೆ ಕೇಳಿದಳು:

ಯಾವ ಮಹಾಯುದ್ಧ ಮುಗಿಸಿ ಬಂದ್ರೋ ಮಹಾರಾಯರು?

ವೆಂಕಟನಿಗೆ ಆಶ್ಚರ್ಯವಾಯಿತು. ಅವನು ತಕ್ಷಣ ತಲೆಯಾಡಿಸಿ, ತುಂಬಾ ಚೆನ್ನಾಗಿತ್ತು ಅಮ್ಮ ಇಡೀ ಮೈದಾನ ನಮಗೇ ಸಿಕ್ಕಿತ್ತು! ದೊಡ್ಡಣ್ಣಂದಿರು ಯಾರೂ ಇರಲಿಲ್ಲ, ಎಂದ.

ಅಮ್ಮ ಅವನ ಒದ್ದೆ ಕೂದಲನ್ನು ಕೈಯಿಂದ ಸವರುತ್ತಾ, ಮೆಲ್ಲಗೆ ನಿಟ್ಟುಸಿರಿಟ್ಟು ನಕ್ಕಳು. ಹೂಂ, ಆಟ ಮುಗೀತು ತಾನೇ? ನಿನ್ನ ಈ ಕೆಸರಾವತಾರ ಸಾಕು, ಮೊದಲು ಹೋಗಿ ಬಿಸಿ ನೀರಲ್ಲಿ ಸ್ನಾನ ಮಾಡು. ಮಳೇಲಿ ನೆನೆದು ಜ್ವರ ತಂದುಕೋಬೇಡ.


ಅವಳು ಸ್ನಾನದ ಮನೆಯ ಕಡೆಗೆ ಅವನನ್ನು ನೂಕುತ್ತಿದ್ದಾಗ, ವೆಂಕಟ ತಿರುಗಿ ನೋಡಿದ. ಅಮ್ಮ ಅಡುಗೆಮನೆಯ ಕಡೆಗೆ ಹೆಜ್ಜೆ ಇಡುತ್ತಾ ಪ್ರೀತಿಯಿಂದ ಗದರುವಂತೆ ಹೇಳಿದಳು:

ಬೇಗ ಬರಬೇಕು, ಮಳೆಗಾಲ ಮುಗಿಯೋ ಮುಂಚೆ ಬಿಸಿಬಿಸಿ ಆಲೂ ಬಜ್ಜಿ ತಿಂದು ಮುಗಿಸು!

ಆ ಕ್ಷಣದಲ್ಲಿ ವೆಂಕಟನಿಗೆ ಅನಿಸಿತು ಆ ದಿನದ ಮಳೆ ಕೇವಲ ಆಟದ ಮೈದಾನವನ್ನು ಮಾತ್ರವಲ್ಲ, ಅಮ್ಮನ ಕಠಿಣ ನಿಯಮಗಳನ್ನೂ ಕರಗಿಸಿ ಮೃದುಗೊಳಿಸಿತ್ತು.

ಸ್ವಲ್ಪ ಸಮಯದ ನಂತರ, ಒಣ ಬಟ್ಟೆಗಳನ್ನು ಧರಿಸಿ ಕೈಯಲ್ಲಿ ಬಿಸಿಬಿಸಿ ಆಲೂ ಬಜ್ಜಿಯ ತಟ್ಟೆಯನ್ನು ಹಿಡಿದು ವೆಂಕಟ ಮತ್ತೆ ಕಿಟಕಿಯ ಬಳಿ ಬಂದು ಕುಳಿತ. ಮೈದಾನ ಈಗ ಮತ್ತೆ ಶೂನ್ಯವಾಗಿತ್ತು. ಮಳೆ ಇನ್ನೂ ಹಸಿರು ಹುಲ್ಲಿನ ಮೇಲೆ ಸದ್ದಿಲ್ಲದೆ ಬೀಳುತ್ತಲೇ ಇತ್ತು. ನಾಳೆ ಹಿರಿಯ ಹುಡುಗರು ಮತ್ತೆ ಬರುತ್ತಾರೆ ಮತ್ತು ನಾಳೆ ಜಗತ್ತು ಮತ್ತೆ ತನ್ನ ಹಳೆಯ ನಿಯಮಗಳಿಗೆ ಮರಳುತ್ತದೆ ಎಂಬುದು ಅವನಿಗೆ ತಿಳಿದಿತ್ತು.

ಆದರೆ ಕೆಲವು ಸಂಜೆಗಳು ಕಾಲದ ಹರಿವಿನಲ್ಲಿ ಕರಗಿ ಹೋಗುವುದಿಲ್ಲ. ವರ್ಷಗಳ ನಂತರ, ವೆಂಕಟ ಆ ಆಟದ ಫಲಿತಾಂಶವನ್ನು ಮರೆತುಬಿಡಬಹುದು ಮತ್ತು ಯಾರು ಹೆಚ್ಚು ಗೋಲು ಹೊಡೆದರು ಎಂಬುದು ನೆನಪಿಲ್ಲದಿರಬಹುದು; ಆದರೆ ಆರು ಜನ ಗೆಳೆಯರು ಇಡೀ ಮೈದಾನವನ್ನು ತಮ್ಮದಾಗಿಸಿಕೊಂಡ ಆ ಒಂದು ಮಳೆಯ ಸಂಜೆ ಮತ್ತು ಅವನಿಗೆ ಸಿಕ್ಕ ಆ ಮುಗ್ಧ ಸ್ವಾತಂತ್ರ್ಯ ಮಾತ್ರ ಅವನ ನೆನಪಿನ ಬುತ್ತಿಯಲ್ಲಿ ಸದಾ ಹಸಿರಾಗಿಯೇ ಉಳಿಯುತ್ತದೆ.




**- ಶ್ರೀಕಾಂತ್ ಶ್ರೀನಿವಾಸ್**

# ರಾಮ ಮಂದಿರ ದೇಣಿಗೆ ಲೂಟಿ ಕ್ರಿಮಿನಲ್ ಅಪರಾಧ

## ವಿಚಾರಣೆಯಲ್ಲಿ ಯಾವುದೇ ರಾಜಕೀಯ ಬೇಡ: ಸುಪ್ರೀಂ ಕೋರ್ಟ್ ನಿರ್ದೇಶನ

• ಪ್ರಜೋದಯ ವರದಿ





**ನವದೆಹಲಿ:** ಅಯೋಧ್ಯೆಯ ರಾಮ ಮಂದಿರಕ್ಕೆ ನೀಡಲಾದ ದೇಣಿಗೆಯ ದುರುಪಯೋಗ ಆರೋಪದ ಕುರಿತು ತನಿಖೆ ನಡೆಸಲು ವಿಶೇಷ ತನಿಖಾ ತಂಡವನ್ನು ರಚಿಸುವ ಸಾಧ್ಯತೆಯ ಬಗ್ಗೆ ಮಾಹಿತಿ ನೀಡುವಂತೆ, ಸುಪ್ರೀಂಕೋರ್ಟ್ ಸೋಮವಾರ ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚನೆ ನೀಡಿದ್ದು, ಈ ಹಿಂದೆ ತನಿಖೆಯ ಮಾಹಿತಿ ಸಲ್ಲಿಸುವಂತೆ ಎಸ್ಐಟಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

ಜೊತೆಗೆ, ಈ ವಿಷಯವನ್ನು ರಾಜಕೀಯಗೊಳಿಸದಂತೆ ದಾವೆದಾರರಿಗೆ ಎಚ್ಚರಿಕೆಯನ್ನೂ ಸುಪ್ರೀಂ ಕೋರ್ಟ್ ನೀಡಿದೆ. ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್ಮಾಲ್ಯ ಬಾಗ್ಚಿ ಮತ್ತು ನ್ಯಾಯಮೂರ್ತಿ ವಿ. ಮೋಹನ ಅವರನ್ನೊಳಗೊಂಡ ಪೀಠವು, ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ, ಎಫ್ಐಆರ್ ದಾಖಲಿಸುವ ಮುನ್ನವೇ ಈ ಸಂಪೂರ್ಣ ಪ್ರಕರಣವನ್ನು ಪರಿಶೀಲಿಸಿದ್ದ ವಿಶೇಷ ತನಿಖಾ ತಂಡಕ್ಕೆ ತನಿಖೆಯ ಜವಾಬ್ದಾರಿಯನ್ನು ವಹಿಸಬಹುದೇ ಎಂದು ಪ್ರಶ್ನಿಸಿತು.

ಸ್ಥಳೀಯ ಪೊಲೀಸರ ಬದಲಿಗೆ ಈ ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ಎಸ್ಐಟಿ ವಹಿಸಬಹುದೇ ಎಂಬುದರ ಬಗ್ಗೆ, ಉತ್ತರ ಪ್ರದೇಶ ಸರ್ಕಾರದಿಂದ ಮಾಹಿತಿ ಪಡೆಯುವಂತೆ ಪೀಠವು ತುಷಾರ್ ಮೆಹ್ತಾ ಅವರಿಗೆ ಸೂಚಿಸಿತು. ಒಂದು ಎಚ್ಚರಿಕೆಯ ಮಾತು, ದಯವಿಟ್ಟು ಈ ವಿಷಯವನ್ನು ರಾಜಕೀಯಗೊಳಿಸಬೇಡಿ. ನ್ಯಾಯಾಲಯಗಳು ರಾಜಕೀಯಕ್ಕೆ ವೇದಿಕೆಯಲ್ಲ. ನಮಗೆ ಇದು ಕೇವಲ ಕ್ರಿಮಿನಲ್ ಅಪರಾಧ ಪ್ರಕರಣವಷ್ಟೇ. ಸೂಕ್ತ ತನಿಖೆ ನಡೆಯುವುದನ್ನು ಖಚಿತಪಡಿಸುವುದು ಮಾತ್ರ ನಮ್ಮ ಉದ್ದೇಶ ಎಂದು ಮುಖ್ಯ ನ್ಯಾಯಮೂರ್ತಿಗಳು ಸ್ಪಷ್ಟವಾಗಿ ಹೇಳಿದರು.

ಹಿಂದಿನ ಆದೇಶದಂತೆ ರಾಜ್ಯ ಸರ್ಕಾರವು ಪ್ರಕರಣದ ಪ್ರಸ್ತುತ ಸ್ಥಿತಿಗತಿಯ ವರದಿಯನ್ನು ಸಲ್ಲಿಸಿದೆ ಎಂದು ತುಷಾರ್ ಮೆಹ್ತಾ ಪೀಠಕ್ಕೆ ಮಾಹಿತಿ ನೀಡಿದರು. ತನಿಖೆ ನಡೆಯುತ್ತಿದೆ, ರಾಮ ಮಂದಿರ ದೇಣಿಗೆ ಲೂಟಿಗೆ ಸಂಬಂಧಿಸಿದಂತೆ 8 ಜನರ ಬಂಧನ ಆಗಿದೆ. ಈ ಹಂತದಲ್ಲಿ ನಾನು ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ತುಷಾರ್ ಮೆಹ್ತಾ ತಿಳಿಸಿದರು.

ಎಸ್ಐಟಿ ಈ ಪ್ರಕರಣದ ತನಿಖೆ ನಡೆಸುತ್ತಿದೆಯೇ ಎಂದು ಕೇಳಿದಾಗ, ಸತ್ಯಾಸತ್ಯತೆಯನ್ನು ಪತ್ತೆಹಚ್ಚಲು ಎಸ್ಐಟಿಯನ್ನು ರಚಿಸಲಾಗಿತ್ತು. ಈಗ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಇದು ಪೊಲೀಸರು ಸ್ವಯಂ ಪ್ರೇರಿತವಾಗಿ ಕ್ರಮ ಕೈಗೊಳ್ಳಬಹುದಾದ ಅಪರಾಧ ಎಂದು ಎಸ್ಐಟಿ ಪತ್ತೆಹಚ್ಚಿತ್ತು ಅಷ್ಟೇ ಎಂದು ಮೆಹ್ತಾ ಉತ್ತರಿಸಿದರು.

ಎಸ್ಐಟಿಯಲ್ಲಿ ಇಬ್ಬರು ಹಿರಿಯ ಐಎಎಸ್ ಅಧಿಕಾರಿಗಳು ಮತ್ತು ಲಕ್ನೋದ ಪೊಲೀಸ್ ಮಹಾ ನಿರೀಕ್ಷಕರು ಇರುವುದನ್ನು ಗಮನಿಸಿದ ನ್ಯಾಯಪೀಠವು, ನ್ಯಾಯಯುತ ಹಾಗೂ ಪಾರದರ್ಶಕ ತನಿಖೆಯನ್ನು ಖಚಿತಪಡಿಸಿಕೊಳ್ಳಲು ಅವರೇ ಮುಖ್ಯ ತನಿಖೆಯನ್ನು ನಡೆಸಬಹುದೇ ಎಂದು ಪ್ರಶ್ನಿಸಿತು. ಮುಂದಿನ ಸೋಮವಾರ ಪ್ರಕರಣದ ವಿಚಾರಣೆ ನಡೆಸಿ ಸೂಕ್ತ ನಿರ್ದೇಶನಗಳನ್ನು ನೀಡುವುದಾಗಿ ನ್ಯಾಯಪೀಠ ತಿಳಿಸಿತು.

ಜುಲೈ 13 ರಂದು, ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಿತಿಗತಿ ವರದಿಯನ್ನು ಸಲ್ಲಿಸುವಂತೆ, ನ್ಯಾಯಪೀಠವು ಉತ್ತರ ಪ್ರದೇಶ ಪೊಲೀಸರಿಗೆ ನಿರ್ದೇಶನ ನೀಡಿತ್ತು. ಅಲ್ಲದೆ, ದೇಣಿಗೆ ಕಳವು ಆರೋಪದ ಕುರಿತು ನ್ಯಾಯಯುತ ಮತ್ತು ನಿಗದಿತ ಕಾಲಮಿತಿಯೊಳಗೆ ತನಿಖೆ ನಡೆಸುವಂತೆ ಕೋರಿ ಸಲ್ಲಿಸಲಾದ ಅರ್ಜಿಗಳ ಸಂಬಂಧ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ನ್ಯಾಯಪೀಠ ನೋಟಿಸ್ ಜಾರಿ ಮಾಡಿತ್ತು.

## ಮಕ್ಕಳ ಕಲ್ಯಾಣ ಸೇವೆಗೆ ಪ್ರಶಸ್ತಿ: ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮಕ್ಕಳ ದಿನಾಚಾರಣೆ-2025ರ ಪ್ರಯುಕ್ತ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ ತಲಾ ರೂ 25,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಸಂಸ್ಥೆಗಳಿಗೆ ತಲಾ ರೂ 1,00,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

2026ನೇ ಸಾಲಿನ ಪ್ರಶಸ್ತಿಗಾಗಿ ನಿಗಧಿಪಡಿಸಿರುವ ಅರ್ಜಿ ನಮೂನೆಗಳನ್ನು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಕಚೇರಿಯಿಂದ ಪಡೆದು ಕನ್ನಡ ಭಾಷೆಯಲ್ಲಿ ಭರ್ತಿ ಮಾಡಿ ಅರ್ಜಿಗಳನ್ನು ಆ.20 ರೊಳಗೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇಲ್ಲಿಗೆ ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

# 5 ದಿನ ಭಾರೀ ಮಳೆ ಸಾಧ್ಯತೆ



• ಪ್ರಜೋದಯ ವರದಿ

**ಬೆಂಗಳೂರು:** ಚಂಡಮಾರುತ ಪ್ರಸರಣ ಪ್ರಭಾವದಿಂದಾಗಿ ವಿವಿಧ ಜಿಲ್ಲೆಗಳಲ್ಲಿ ಮುಂದಿನ ಐದು ದಿನ ಭಾರೀ ಮಳೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಕಳೆದ ಮೂರು ದಿನಗಳಿಂದಲೂ ಭಾರೀ ಮಳೆಯಾಗುತ್ತಿದ್ದು, ಜುಲೈ 22ರ ವರೆಗೂ ಭಾರೀ ಮಳೆ ಸುರಿಯಲಿದೆ. ನಂತರ ಮೂರು ದಿನಗಳ ಅವಧಿಗೆ ಸಾಧಾರಣ ಮಳೆ ಮುಂದುವರಿಯಲಿದೆ.

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಬೆಳಗಾವಿ ಹಾಗೂ ಬೀದರ್ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಭಾರೀ ಮಳೆ ಆಗಲಿದೆ. ಈ ಅವಧಿಯಲ್ಲಿ ಗಾಳಿಯ ವೇಗವು ಪ್ರತಿ ಗಂಟೆಗೆ 30 ರಿಂದ 40 ಕಿ.ಮೀ. ವೇಗದಲ್ಲಿ ಇರಲಿದೆ ಎಂದು ಮುನ್ಸೂಚನೆ ನೀಡಿದೆ.

ಸರಾಸರಿ ಸಮುದ್ರ ಮಟ್ಟದಲ್ಲಿ ಮಾನ್ಸೂನ್ ಟ್ರಫ್ ಈಗ ಶ್ರೀಗಂಗಾನಗರ, ರೋಹಕ್, ಹಾರ್ಡೋಯ್, ವಾರಣಾಸಿ, ರಾಂಚಿ, ಸಾಗರ್ ದ್ವೀಪದ ಮೂಲಕ ಹಾದು ಹೋಗುತ್ತದೆ ಮತ್ತು ಅಲ್ಲಿಂದ ಆಗ್ನೇಯಕ್ಕೆ ವಾಯುವ್ಯ ಬಂಗಾಳ ಕೊಲ್ಲಿಯ ಕಡೆಗೆ ವಿಸ್ತರಿಸುತ್ತದೆ ಮತ್ತು ಸರಾಸರಿ ಸಮುದ್ರ ಮಟ್ಟದಿಂದ 1.5 ಕಿ.ಮೀ. ವರೆಗೆ ವಿಸ್ತರಿಸಲಿದೆ.

ರಾಜ್ಯದಲ್ಲಿ ಜು.25 ರ ವರೆಗೆ ಮಳೆ ಮುಂದುವರಿಯಲಿದ್ದು, ದಕ್ಷಿಣ ಒಳನಾಡಿನಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಜಿಲ್ಲೆಗಳಲ್ಲಿ ಮಳೆ ಆಗಲಿದ್ದು, ಶಿವಮೊಗ್ಗ ಹಾಗೂ ವಿಜಯನಗರದಲ್ಲೂ ಮಳೆ ಆಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ವರದಿ ತಿಳಿಸಿದೆ.

# ಸಂಸತ್ ಅಧಿವೇಶನ ಪ್ರಗತಿ ಪರವಾಗಿರಲಿ: ಮೋದಿ ಮನವಿ

• ಪ್ರಜೋದಯ ವರದಿ



**ನವದೆಹಲಿ:** ಸಂಸತ್ತಿನ ಮಹತ್ವದ ಮಳೆಗಾಲದ ಅಧಿವೇಶನ ಸೋಮವಾರದಿಂದ ಆರಂಭವಾಗಿದ್ದು, ಸದನ ಅತ್ಯಂತ ಉತ್ಪಾದಕ ಹಾಗೂ ದೇಶದ ಹಿತದೃಷ್ಟಿಯಿಂದ ಪ್ರಗತಿಪರವಾಗಿರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಆಶಿಸಿದರು.

ಅಧಿವೇಶನ ಆರಂಭಕ್ಕೂ ಮುನ್ನ ಸಂಸತ್ ಭವನದ ಆವರಣದಲ್ಲಿ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಅವರು, ಸಂಸತ್ತು ಕೇವಲ ಗದ್ದಲ ಎಬ್ಬಿಸುವ ವೇದಿಕೆಯಾಗಬಾರದು ಬದಲಿಗೆ ಬಲವಾದ ಸತ್ಯಗಳ ಆಧಾರದ ಮೇಲೆ ಮುಕ್ತವಾಗಿ ಚರ್ಚಿಸುವ ವೇದಿಕೆಯಾಗಬೇಕು ಎಂದು ವಿರೋಧ ಪಕ್ಷಗಳಿಗೆ ಕರೆ ನೀಡಿದರು.

ಮಳೆಗಾಲವಾಗಲಿ ಅಥವಾ ಮಳೆಗಾಲದ ಅಧಿವೇಶನವಾಗಲಿ, ಎರಡೂ ಸಕ್ರಿಯವಾಗಿದ್ದರೆ ಮಾತ್ರ ದೇಶಕ್ಕೆ ಹೆಚ್ಚಿನ ಉತ್ಪಾದಕತೆ ಸಿಗುತ್ತದೆ. ಸಂಸತ್ತಿನಲ್ಲಿ ಪ್ರತಿಯೊಬ್ಬರ ಧ್ವನಿಗೂ ಮುಕ್ತ ಅವಕಾಶವಿರಬೇಕು. ಎಲ್ಲಿ ಬಲವಾದ ತರ್ಕ ಮತ್ತು ನಿಖರವಾದ ಅಂಕಿ-ಅಂಶಗಳಿರುತ್ತವೆಯೋ, ಅಲ್ಲಿ ಅನಗತ್ಯ ಬಿರುಗಾಳಿ (ತೂಫಾನ್) ಎಬ್ಬಿಸುವ ಅಗತ್ಯವೇ ಇರುವುದಿಲ್ಲ'' ಎಂದು ಪ್ರಧಾನಿ ಮೋದಿ ಮಾರ್ಮಿಕವಾಗಿ ನುಡಿದರು.

**ರಾಹುಲ್ ಗಾಂಧಿಗೆ ಪರೋಕ್ಷ ಲೇವಡಿ**

ಕಳೆದ ಒಂದು ತಿಂಗಳಲ್ಲಿ ಭಾರತವು ಜಾಗತಿಕವಾಗಿ ಮತ್ತು ಬಾಹ್ಯಾಕಾಶ ರಂಗದಲ್ಲಿ ಸಾಧಿಸಿದ ಪ್ರಮುಖ ಮೈಲಿಗಲ್ಲುಗಳನ್ನು ಪ್ರಧಾನಿ ಮೋದಿ ಹೆಮ್ಮೆಯಿಂದ ಸ್ಮರಿಸಿದರು. ಕಳೆದ ವರ್ಷದ ಅಧಿವೇಶನದ ಮುನ್ನ ಭಾರತೀಯ ಪ್ರಜೆಯೊಬ್ಬರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ತಲುಪಿದ್ದರು. ಈಗ ಭಾರತದ ಹೆಮ್ಮೆಯ ಯುವ ಸ್ಟಾರ್ಟ್ ಅಪ್ ಕಂಪನಿಯಾದ ಸ್ಕೈರೂಟ್ ಏರೋಸ್ಪೇಸ್ ಬಾಹ್ಯಾಕಾಶ ಕ್ಷೇತ್ರದಲ್ಲಿ ಜಗತ್ತೇ ಬೆರಗಾಗುವಂತಹ ಐತಿಹಾಸಿಕ ಸಾಧನೆ ಮಾಡಿದೆ ಎಂದು ಅವರು ಶ್ಲಾಘಿಸಿದರು.

ಈ ಇಡೀ ಸ್ಕೈರೂಟ್ ತಂಡದ ವಿಜ್ಞಾನಿಗಳು ಮತ್ತು ಉದ್ಯಮಿಗಳ ಸರಾಸರಿ ವಯಸ್ಸು ಕೇವಲ 28 ವರ್ಷಗಳು. ದೇಶದ ಯುವಶಕ್ತಿಯ ಸಾಮರ್ಥ್ಯಕ್ಕೆ ಇದು ಸಾಕ್ಷಿ. ನಾನಿಲ್ಲಿ ಯಾವುದೇ 56 ವರ್ಷದ ಯುವಕನ ಬಗ್ಗೆ ಮಾತನಾಡುತ್ತಿಲ್ಲ ಎಂದು ಹೇಳುವ ಮೂಲಕ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ (ವಯಸ್ಸು 56) ಅವರ ಹೆಸರನ್ನು ಪ್ರಸ್ತಾಪಿಸದೆಯೇ ಪರೋಕ್ಷವಾಗಿ ಟಾಂಗ್ ನೀಡಿದರು.

## ನಾಳೆ ವಿದ್ಯುತ್ ವ್ಯತ್ಯಯ



• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ 66 ಕೆ.ವಿ. ಮಗ್ಗೆ ವಿದ್ಯುತ್ ಪ್ರಸರಣ ಮಾರ್ಗದಲ್ಲಿ ತುರ್ತು ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಜು.22 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ 66/11ಕೆ.ವಿ ಮಗ್ಗೆ ವಿ.ವಿ ಕೇಂದ್ರ, ವಿದ್ಯುತ್ ಸರಬರಾಜಾಗುವ ಕಾರಗೋಡು, ಮಗ್ಗೆ, ಚನ್ನಾಪುರ, ಗಂಗಾರ ಮತ್ತು ಪಾಳ್ಯ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯ ನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

# ಬಸ್ ಶೆಲ್ಟರ್ ಕಾಮಗಾರಿ ಸ್ಥಗಿತ ಖಂಡಿಸಿ ಪ್ರತಿಭಟನೆ

## ವಿವಿಧ ಸಂಘಟನೆಗಳ ಕಾರ್ಯಕರ್ತರಿಂದ ರಾಷ್ಟ್ರೀಯ ಹೆದ್ದಾರಿ ತಡೆ ಎಚ್ಚರಿಕೆ

• ಪ್ರಜೋದಯ ವರದಿ



**ಸಕಲೇಶಪುರ:** ಪಟ್ಟಣದ ಹಳೇ ಬಸ್ ನಿಲ್ದಾಣದ ಸಮೀಪ ಉಪನೊಂದಣಾಧಿಕಾರಿ ಹಾಗೂ ಅಬಕಾರಿ ಇಲಾಖೆಗೆ ಸೇರಿದ ಜಾಗದಲ್ಲಿ ನಿರ್ಮಾಣವಾಗುತ್ತಿದ್ದ ಬಸ್ ಶೆಲ್ಟರ್ ಕಾಮಗಾರಿಯನ್ನು ಅಧಿಕಾರಿಗಳು ಸ್ಥಗಿತಗೊಳಿಸಿರುವುದನ್ನು ಖಂಡಿಸಿ ಹಿಂದೂ ಪರ ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಹಿಂದೂ ಪರ ಹೋರಾಟಗಾರ ರಘು ಮಾತನಾಡಿ, ಸಕಲೇಶಪುರ ಮಲೆನಾಡು ಪ್ರದೇಶವಾಗಿರುವುದರಿಂದ ಇಲ್ಲಿ ವರ್ಷಪೂರ್ತಿ ಮಳೆ ಹಾಗೂ ಚಳಿ ಹೆಚ್ಚಿರುತ್ತದೆ. ವಿವಿಧ ಭಾಗಗಳಿಂದ ಪಟ್ಟಣಕ್ಕೆ ಆಗಮಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಶಾಸಕ ಸಿಮೆಂಟ್ ಮಂಜು ಅವರ ಅನುದಾನದಲ್ಲಿ ಬಸ್ ಶೆಲ್ಟರ್ ನಿರ್ಮಿಸಲಾಗುತ್ತಿತ್ತು. ಕಾಮಗಾರಿ ಶೇ.75ರಷ್ಟು ಪೂರ್ಣಗೊಂಡಿರುವ ಸಂದರ್ಭದಲ್ಲಿ ಅಧಿಕಾರಿಗಳು ಏಕಾಏಕಿ ಕಾಮಗಾರಿ ಸ್ಥಗಿತಗೊಳಿಸಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಉಪ ನೊಂದಣಾಧಿಕಾರಿ ಹಾಗೂ ಅಬಕಾರಿ ಇಲಾಖೆಯ ಕಚೇರಿಗಳು ಈಗಾಗಲೇ ಬೇರೆ ಕಟ್ಟಡಗಳಿಗೆ ಸ್ಥಳಾಂತರಗೊಂಡಿದ್ದು, ಸಂಬಂಧಿತ ಜಾಗ ಸಾರ್ವಜನಿಕ ಬಳಕೆಗೆ ಉಪಯೋಗವಾಗಬೇಕು. ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಲಾಗುತ್ತಿರುವ ಬಸ್ ಶೆಲ್ಟರ್ ಕಾಮಗಾರಿಯನ್ನು ತಡೆಯುವುದು ಯಾವುದೇ ರೀತಿಯಲ್ಲೂ ಸಮಂಜಸವಲ್ಲ ಎಂದು ಹೇಳಿದರು.

ಕಾಮಗಾರಿ ಸ್ಥಗಿತಗೊಳಿಸುವ ನಿರ್ಧಾರವನ್ನು ಕೂಡಲೇ ಹಿಂಪಡೆಯಬೇಕು. ಇಲ್ಲವಾದರೆ ಜಿಲ್ಲಾಡಳಿತ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಗಮನ ಸೆಳೆಯಲು ಮುಂದಿನ ಹಂತದಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆ ಸೇರಿದಂತೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಹಳೆ ಬಸ್ ನಿಲ್ದಾಣದ ಬಳಿ ಮಾನವ ಸರಪಳಿ ರಚಿಸಿದ ಪ್ರತಿಭಟನಾಕಾರರು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ, ಬಳಿಕ ಉಪ ವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ರೈಲ್ವೆ ಹೋರಾಟ ಸಮಿತಿಯ ನಾರಾಯಣ ಆಳ್ವ, ಬಿಜೆಪಿ ಮುಖಂಡ ಲೋಹಿತ್ ಕೌಡಳ್ಳಿ, ಹಿಂದೂ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ಮಂಜು ಕಬ್ಬಿನಗದ್ದೆ, ಮಿಲಿಟರಿ ಧರ್ಮಣ್ಣ, ನಾಗರಾಜ್, ಆಟೋ ರವಿ, ಕೌಶಿಕ್, ಶಿವು ಜಿಪ್ಪಿ, ದಿಲೀಪ್, ಹರೀಶ್ ಆಟೋ, ಮನು ಆಚಂಗಿ, ಪ್ರದೀಪ್ ಹಾಗೂ ವಿವಿಧ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

# ಶೌರ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

ಹಾಸನ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆವತಿಯಿಂದ ಮಕ್ಕಳ ದಿನಾಚಾರಣೆ-2025ರ ಪ್ರಯುಕ್ತ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದ ಇತರರ ಪ್ರಾಣ ರಕ್ಷಣೆಗಾಗಿ ಅಸಾಧಾರಣ ಧೈರ್ಯ ಸಾಹಸ ಪ್ರದರ್ಶಿಸಿದ 6 ರಿಂದ 18ವರ್ಷದೊಳಗಿನ ಬಾಲಕರಿಗೆ ಹೊಯ್ಸಳ ಮತ್ತು ಬಾಲಕಿಯರಿಗೆ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಪ್ರಶಸ್ತಿಗೆ ಅರ್ಜಿ ಸಲ್ಲಸಲು ಪ್ರಕರಣವು 2025 ರ ಆ.1 ರಿಂದ 2026 ರ ಜು.31 ರೊಳಗೆ ನಡೆದಿರಬೇಕು, ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ 10000 ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ.

2026ನೇ ಸಾಲಿನ ಪ್ರಶಸ್ತಿಗಾಗಿ ನಿಗಧಿಪಡಿಸಿರುವ ಅರ್ಜಿ ನಮೂನೆಗಳನ್ನು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಕಚೇರಿಯಿಂದ ಪಡೆದು ಕನ್ನಡ ಭಾಷೆಯಲ್ಲಿ ಭರ್ತಿ ಮಾಡಿ ಅರ್ಜಿಗಳನ್ನು ಆ.20 ರೊಳಗೆ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇಲ್ಲಿಗೆ ಸಲ್ಲಿಸಬಹುದಾಗಿ ಎಂದು ತಿಳಿಸಿದ್ದಾರೆ.

## ಜು.24 ರಂದು ಒಂದು ದಿನದ ಕಾರ್ಯಾಗಾರ

ಹಾಸನ: ಡಿಜಿಎಫ್‌ಟಿ ಬೆಂಗಳೂರು ವತಿಯಿಂದ ಹಾಸನ ಡೈರಿ ಸರ್ಕಲ್ ಬಿ.ಎಂ ರಸ್ತೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನಲ್ಲಿ ಜು.24 ರಂದು ಬೆಳಿಗ್ಗೆ 9.30ಕ್ಕೆ ಜಿಲ್ಲಾಮಟ್ಟದ ರಫ್ತು ಉತ್ತೇಜನ ಯೋಜನೆಯಡಿ ಉದ್ದಿಮೆದಾರರಿಗೆ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರ ಕಚೇರಿ ಹಾಗೂ ಕಚೇರಿ ದೂರವಾಣಿ ಸಂಖ್ಯೆ: 08172-240606 ಗೆ ಸಂಪರ್ಕಿಸಬಹುದಾಗಿದೆ.

## ಸತತ 2ನೇ ಬಾರಿಗೆ ಗೋಲ್ಡನ್ ಬೂಟ್ ಗೆದ್ದು ಇತಿಹಾಸ ನಿರ್ಮಿಸಿದ ಎಂಬಾಪ್ಪೆ

• ಪ್ರಜೋದಯ ವರದಿ

**ಈಸ್ಟ್ ರುದರ್‌ಫೋರ್ಡ್:** ಫೀಫಾ ಫುಟ್‌ಬಾಲ್ ವಿಶ್ವಕಪ್-2026 ಮುಕ್ತಾಯವಾಗಿದ್ದು ಫ್ರಾನ್ಸ್‌ನ ಸ್ಟಾರ್ ಫಾರ್ವರ್ಡ್ ಕೈಲಿಯನ್ ಎಂಬಾಪ್ಪೆ ಸತತ ಎರಡನೇ ಬಾರಿ ಗೋಲ್ಡನ್ ಬೂಟ್ ಪ್ರಶಸ್ತಿಯನ್ನು ಗೆದ್ದರೆ, ವಿಶ್ವಕಪ್ ಚಾಂಪಿಯನ್ ಸ್ಪೇನ್ ತಂಡದ ನಾಯಕ ರೋಡ್ರಿ, ಗೋಲ್ಡನ್ ಬಾಲ್ ಪ್ರಶಸ್ತಿಗೆ ಭಾಜನರಾದರು.

ಗೋಲ್‌ಕೀಪರ್ ಉನೈ ಸಿಮೋನ್ ಗೋಲ್ಡನ್ ಗ್ಲೋವ್ಸ್, ಹಾಗೂ 18 ವರ್ಷದ ರಕ್ಷಣಾ ಆಟಗಾರ ಪೌ ಕುಬಾಸಿರ್ ಶ್ರೇಷ್ಠ ಯುವ ಆಟಗಾರ (ಬೆಸ್ಟ್ ಯಂಗ್ ಪ್ಲೇಯರ್)ಪ್ರಶಸ್ತಿಯನ್ನು ಪಡೆದರು.ಮ್ಯಾಂಚೆಸ್ಟರ್ ಸಿಟಿ ಮಧ್ಯಮೈದಾನದ ಆಟಗಾರ ರೋಡ್ರಿ, ಮೊಣಕಾಲಿನ ಶಸ್ತ್ರಚಿಕಿತ್ಸೆ ಯ ಬಳಿಕ ಎಂಟು ತಿಂಗಳು ಮೈದಾನದಿಂದ ದೂರವಿದ್ದರೂ ವಿಶ್ವಕಪ್‌ನಲ್ಲಿ ಸ್ಪೇನ್ ತಂಡವನ್ನು ಮುನ್ನಡೆಸಿದ ನಾಯಕತ್ವಕ್ಕಾಗಿ ಗೋಲ್ಡನ್ ಬಾಲ್ ಪ್ರಶಸ್ತಿಗೆ ಆಯ್ಕೆಯಾದರು.

# ಸಂಸತ್ ಅಧಿವೇಶನ: ನೀಟ್ ಕುರಿತು ಪ್ರತಿಪಕ್ಷಗಳ ಗದ್ದಲ

## ಉಭಯ ಸದನಗಳು ಮಂಗಳವಾರಕ್ಕೆ ಮುಂದೂಡಿಕೆ

• ಪ್ರಜೋದಯ ವರದಿ



**ನವದೆಹಲಿ:** ಸಂಸತ್ತಿನ ಮುಂಗಾರು ಅಧಿವೇಶನ ಸೋಮವಾರದಿಂದ ಆರಂಭವಾಗಿದ್ದು ಸದನದಲ್ಲಿ ನೀಟ್-ಯುಜಿ ಪರೀಕ್ಷಾ ಪತ್ರಿಕೆ ಸೋರಿಕೆ, ಅಯೋಧ್ಯೆ ರಾಮ ಮಂದಿರದಲ್ಲಿ ದೇಣಿಗೆ ಕಳ್ಳತನ ಮತ್ತು ಎಥೆನಾಲ್ ಮಿಶ್ರಣದ ವಿವಾದಗಳ ಕುರಿತಂತೆ ಪ್ರತಿಪಕ್ಷಗಳು ಗದ್ದಲ ಎಬ್ಬಿಸಿದ್ದು ಉಭಯ ಸದನಗಳನ್ನು ಮಂಗಳವಾರಕ್ಕೆ ಮುಂದೂಡಲಾಗಿದೆ.

ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಶಿವಸೇನೆ (ಯುಬಿಟಿ) ಪಕ್ಷಾಂತರಗಳ ನಂತರ ಎರಡೂ ಸದನಗಳು ಬದಲಾದ ರಾಜಕೀಯ ಅಂಕಗಣಿತಕ್ಕೆ ಸಾಕ್ಷಿಯಾಗಿತ್ತು. ಇಂದಿನಿಂದ ಆರಂಭವಾಗಿರುವ ಸಂಸತ್ತಿನ ಮುಂಗಾರು ಅಧಿವೇಶನ ಆಗಸ್ಟ್ 13 ರವರೆಗೆ ನಡೆಯಲಿದ್ದು ಅಧಿವೇಶನದಲ್ಲಿ ಮೋದಿ ಸರ್ಕಾರ ಹಲವಾರು ಪ್ರಮುಖ ಮಸೂದೆಗಳನ್ನು ಮಂಡಿಸಲಿದೆ. ಅತಿದೊಡ್ಡ ಸಸ್ಪೆನ್ಸ್ ಎಂದರೆ ಡಿಲಿಮಿಟೇಶನ್ ಮತ್ತು ಮಹಿಳಾ ಮೀಸಲಾತಿ ಮಸೂದೆಗಳು. ಬದಲಾದ ರಾಜಕೀಯ ಚಲನಶೀಲತೆ ಮತ್ತು ಹೊಸ ಲೋಕಸಭಾ ಸಂಖ್ಯಾಬಲದ ಆಟವು ಸರ್ಕಾರದ ಭರವಸೆಯನ್ನು ಹೆಚ್ಚಿಸಿದೆ.

ಏತನ್ಮಧ್ಯೆ, ಬಂಡಾಯ ಟಿಎಂಸಿ ಸಂಸದರನ್ನು ಸರ್ವಪಕ್ಷ ಸಭೆಗೆ ಕರೆದ ನಂತರ ವಿರೋಧ ಪಕ್ಷದ ಸಭಾತ್ಯಾಗವು ಅಧಿವೇಶನ ಪ್ರಾರಂಭವಾಗುವ ಮೊದಲೇ ರಾಜಕೀಯ ತಾಪಮಾನವನ್ನು ಹೆಚ್ಚಿಸಿತ್ತು. ಸಂಸತ್ತಿನ ಮಳೆಗಾಲದ ಅಧಿವೇಶನವು ಗಣನೀಯ ಗದ್ದಲದೊಂದಿಗೆ ಪ್ರಾರಂಭವಾಗಿದೆ. ನೀಟ್ ಪತ್ರಿಕೆ ಸೋರಿಕೆ ಮತ್ತು ರಾಮ ಮಂದಿರ ವಿವಾದದಂತಹ ವಿಷಯಗಳ ಬಗ್ಗೆ ವಿರೋಧ ಪಕ್ಷಗಳು ಭಾರಿ ಗದ್ದಲವನ್ನು ಸೃಷ್ಟಿಸಿವೆ. ಇದು ಲೋಕಸಭೆ ಮತ್ತು ರಾಜ್ಯಸಭೆ ಎರಡರಲ್ಲೂ ಪದೇ ಪದೇ ಮುಂದೂಡಿಕೆಗೆ ಕಾರಣವಾಯಿತು.

**ಯಾವ ಮಸೂದೆಗಳನ್ನು ಪರಿಚಯಿಸಲಾಗುವುದು?**

ಆಗಸ್ಟ್ 13 ರವರೆಗೆ ನಡೆಯುವ ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಒಟ್ಟು 19 ಅಧಿವೇಶನಗಳು ನಡೆಯಲಿವೆ. ಈ ಅವಧಿಯಲ್ಲಿ ಏಳು ಮಸೂದೆಗಳನ್ನು ಪರಿಚಯಿಸಲಾಗುವುದು. ವರದಿಗಳ ಪ್ರಕಾರ, ವಂದೇ ಮಾತರಂ ಮಸೂದೆಯನ್ನು ಸೋಮವಾರ ಸಂಸತ್‌ನಲ್ಲಿ ಮಂಡಿಸಲಾಗುವುದು.

# ಧ್ಯಾನದಿಂದ ಶಾಂತಿ, ಏಕಾಗ್ರತೆ ಸಾಧ್ಯ



• ಪ್ರಜೋದಯ ವರದಿ

**ಹಾಸನ:** ಧ್ಯಾನದಿಂದ ಮನಸ್ಸಿಗೆ ಶಾಂತಿ ಹಾಗೂ ಏಕಾಗ್ರತೆ ಲಭಿಸುತ್ತದೆ ಎಂದು ಧ್ಯಾನ ತರಬೇತಿದಾರ ಮಹೇಶ್ ಅಭಿಪ್ರಾಯಪಟ್ಟರು.

ನಗರದ ವಿಜಯನಗರ ಪತಂಜಲಿ ಯೋಗ ಕೇಂದ್ರಕ್ಕೆ ವಿಶೇಷ ಅತಿಥಿಯಾಗಿ ಆಗಮಿಸಿ, ಹೃದಯಕ್ಕೆ ಸಂಬಂಧಿಸಿದಂತೆ ಧ್ಯಾನ ಮತ್ತು ಏಕಾಗ್ರತೆ ಕುರಿತು ವಿಶೇಷ ಉಪನ್ಯಾಸ ನೀಡಿ ಯೋಗ ಶಿಬಿರಾರ್ಥಿಗಳಿಗೆ ಧ್ಯಾನ ಮಾಡಿಸಿದರು.

ದೈನಂದಿನ ಜೀವನದಲ್ಲಿ ಎದುರಾಗುವ ಒತ್ತಡ ನಿವಾರಣೆಗಾಗಿ, ಮನಸ್ಸಿನ ಶಾಂತಿ, ನೆಮ್ಮದಿಗಾಗಿ ಹಾಗೂ ಸದಾ ಕಾಲ ಸಂತಸದ ಜೀವನಕ್ಕಾಗಿ ಧ್ಯಾನ ಮಾಡುವ ಮೂಲಕ ಎಲ್ಲರೂ ಆರೋಗ್ಯವಂತರಾಗಬೇಕು ಎಂದು ಅವರು ಕಿವಿಮಾತು ಹೇಳಿದರು.

ಧ್ಯಾನ ತರಬೇತಿದಾರರಾದ ಭವಾನಿ ಮಾತನಾಡಿ, ಎಲ್ಲರೂ ಆರೋಗ್ಯವಂತರಾಗಿ ಸುಖ, ಶಾಂತಿ, ಸಂತೋಷದಿಂದ ಜೀವನ ನಡೆಸಲು ಹಾಗೂ ಧನಾತ್ಮಕವಾಗಿ ಚಿಂತಿಸಲು ಧ್ಯಾನ ಅತ್ಯುತ್ತಮ ಸಾಧನವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಎಸ್.ಡಿ. ಲೋಕನಾಥ್, ಯೋಗ ತರಬೇತಿದಾರರಾದ ಎಚ್.ಜೆ. ಸುರೇಶ್, ಸಚಿನ್, ಲತಾಮಣಿ, ಪರಮೇಶ್ ಮಡಬಲು, ವೀಣಾ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ದೇಶಭಕ್ತಿ ಗೀತ ಗಾಯನ ಸ್ಪರ್ಧೆಯಲ್ಲಿ ಶಿಕ್ಷಣಾಧಿಕಾರಿ ಎ.ಜೆ.ಕೃಷ್ಣೇಗೌಡ

# ಮಕ್ಕಳಲ್ಲಿ ಸ್ಕೌಟ್ಸ್- ಗೈಡ್ಸ್ ದೇಶಭಕ್ತಿ ಬೆಳೆಸುತ್ತದೆ

• ಪ್ರಜೋದಯ ವರದಿ




**ಆಲೂರು:** ಸ್ಕೌಟ್ಸ್ ಗೈಡ್ಸ್ ಮಕ್ಕಳಲ್ಲಿ ಶಿಸ್ತು ಸಂಯಮ ಸೇವೆ ಮುಂತಾದ ಮಹತ್ತರ ಮೌಲ್ಯಗಳ ಜೊತೆಗೆ ದೇಶಭಕ್ತಿ ರಾಷ್ಟ್ರ ಪ್ರೇಮ ನಾಡು-ನುಡಿ ಬಗೆಗಿನ ಗೌರವವನ್ನು ವೃದ್ಧಿಸುವ ನಿಟ್ಟಿನಲ್ಲಿ ಶ್ಲಾಘನೀಯ ಕಾರ್ಯ ಮಾಡುತ್ತಿದೆ ಎಂದು ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಜೆ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಪಟ್ಟಣದ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡ ತಾಲ್ಲೂಕು ಮಟ್ಟದ ದೇಶಭಕ್ತಿ ಗೀತ ಗಾಯನ ಸ್ಪರ್ಧೆ ಉದ್ಘಾಟಿಸಿ ಮಾತನಾಡಿ, ನಮ್ಮ ತಾಲ್ಲೂಕಿನಲ್ಲಿ ಸ್ಕೌಟ್ಸ್ ಗೈಡ್ಸ್ ಉತ್ತಮ ಕಾರ್ಯವನ್ನು ಮಾಡುತ್ತಿದೆ. ದೇಶಭಕ್ತಿ ಗೀತ ಗಾಯನ ಸ್ಪರ್ಧೆಯನ್ನು ಹಮ್ಮಿಕೊಂಡಿರುವುದು ಉತ್ತಮ ಕಾರ್ಯ. ಮಕ್ಕಳು ಗೀತೆಯನ್ನು ಕಲಿಯುವ ಹಂತದಲ್ಲಿ ಗೀತೆಯ ಗೀತೆಯ ಆಶಯವನ್ನು ಆಸ್ವಾದಿಸಿ ಆನಂದಿಸಿ ಹಾಡುವುದರಿಂದ ಕವಿಯ ಮೂಲ ಉದ್ದೇಶವಾದ ರಾಷ್ಟ್ರಭಕ್ತಿ ದೇಶಪ್ರೇಮ ಮುಂತಾದ ಅಂಶಗಳನ್ನು ಮಕ್ಕಳು ಸಹಜವಾಗಿಯೇ ಅಳವಡಿಸಿಕೊಳ್ಳುತ್ತಾರೆ ಎಂದರು.

ಮಕ್ಕಳಿಗೆ ಚಿಕ್ಕ ವಯೋಮಾನದಿಂದಲೇ ತಂದೆ -ತಾಯಿಗೆ, ಗುರು -ಹಿರಿಯರಿಗೆ, ನಾಡು-ನುಡಿಗೆ ಗೌರವವನ್ನು ಕೊಡುವ ಹಾಗೂ ಸೇವೆ ಮಾಡುವ ಮನೋಭಾವನೆಯನ್ನು ಮೂಡಿಸಬೇಕಾಗಿದೆ. ಈ ಕಾರ್ಯವನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಶಾಲಾ ಹಂತದಿಂದ ತಾಲ್ಲೂಕು ಜಿಲ್ಲೆ ರಾಜ್ಯದಾದ್ಯಂತ ಮಾಡುತ್ತಿದೆ. ಸ್ಪರ್ಧೆಯಲ್ಲಿ ಸೋಲು ಗೆಲುವು ಸಹಜ. ಸೋತವರು ಕುಗ್ಗದೆ, ಗೆದ್ದವರು ಹಿಗ್ಗದೇ ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಬೇಕಿದೆ ಎಂದರು.

ಸಂಸ್ಥೆಯ ಉಪಾಧ್ಯಕ್ಷೆ ಸಿ.ಎಸ್. ಪೂರ್ಣಿಮಾ ಮಾತನಾಡಿ, ಸ್ಪರ್ಧೆಯಲ್ಲಿ ಸೋಲು ಗೆಲುವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಎರಡನ್ನು ಸಮಾನವಾಗಿ ಸ್ವೀಕರಿಸಬೇಕು. ಸೋತವರು ಮುಂದಿನ ಹಂತದಲ್ಲಿ ಗೆಲ್ಲಲು ಸಿದ್ಧತೆ ಮಾಡಿಕೊಳ್ಳಬೇಕು. ಗೆದ್ದವರು ಹಿಗ್ಗದೇ ಇನ್ನೂ ಉತ್ತಮ ರೀತಿಯಲ್ಲಿ ಸಿದ್ದಗೊಳ್ಳಬೇಕು ಇಂದಿನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಂತ ಮಕ್ಕಳು, ಜಿಲ್ಲಾ ಹಂತದಲ್ಲಿಯೂ ಬಹುಮಾನಗಳಿಸಿ ತಾಲ್ಲೂಕಿಗೆ ತಮ್ಮ ತಮ್ಮ ಶಾಲೆಗೆ ಒಳ್ಳೆಯ ಕೀರ್ತಿಯನ್ನು ತರಬೇಕು ಎಂದು ಶುಭ ಕೋರಿದರು.

ಸಂಸ್ಥೆಯ ಸಹಾಯಕ ಆಯುಕ್ತ ಎಂ.ಬಾಲಕೃಷ್ಣ ಮಾತನಾಡಿ, ಸ್ಕೌಟ್ಸ್ ಗೈಡ್ಸ್ ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ವೃದ್ಧಿಸುವುದರ ಜೊತೆಗೆ ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ ಚಿಂತನೆಗಳನ್ನು ಹೆಚ್ಚಿಸುತ್ತದೆ. ಬಹುತೇಕ ಶಾಲೆಗಳಲ್ಲಿ ಸ್ಕೌಟ್ಸ್ ಗೈಡ್ಸ್ ದಳಗಳು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿವೆ. ತಾಲ್ಲೂಕು ಆಡಳಿತವನ್ನು, ಶಿಕ್ಷಣ ಇಲಾಖೆಯನ್ನು, ಖಾಸಗಿ ಶಾಲೆಗಳ ಮುಖ್ಯಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕ್ರಿಯಾಶೀಲವಾಗಿ ಕಾರ್ಯ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯದರ್ಶಿ ಕೊಟ್ರೇಶ್ ಎಸ್. ಉಪ್ಪಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಭಾರತ್ ಸ್ಕೌಟ್ಸ್ ಗೈಡ್ಸ್ ಮಕ್ಕಳಲ್ಲಿ ವಿಶ್ವಮಾನವ ಭ್ರಾತೃತ್ವ ಬೆಳೆಸುವುದರ ಜೊತೆಗೆ ಸಾಂಘಿಕ ಬದುಕಿನ ಮೌಲ್ಯಗಳನ್ನು ಮನದಟ್ಟು ಮಾಡುತ್ತದೆ. ನಾಡು, ನುಡಿ, ದೇಶದ ಬಗ್ಗೆ ಗೌರವ ಬೆಳೆಸುವ, ಸಾಂವಿಧಾನಿಕ ಕರ್ತವ್ಯಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ದೇಶದಾದ್ಯಂತ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ವಿದ್ಯಾರ್ಥಿಗಳಿಗೆ ವಿವಿಧ ವಿಭಾದಲ್ಲಿ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಮೌಲಿಕ ಬದುಕನ್ನು ಕಲಿಸುತ್ತಿದೆ ಎಂದರು.

**ಜಿಲ್ಲಾ ಮಟ್ಟಕ್ಕೆ ಆಯ್ಕೆ**

ಕಬ್ಸ್ ವಿಭಾಗದಲ್ಲಿ ಆಲೂರಿನ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯ ಮಕ್ಕಳು ಪ್ರಥಮ ಸ್ಥಾನ, ಬುಲ್ ಬುಲ್ಸ್ ವಿಭಾಗದಲ್ಲಿ ಬೈರಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಪ್ರಥಮ ಸ್ಥಾನ, ಸ್ಕೌಟ್ಸ್ ವಿಭಾಗದಲ್ಲಿ ಬೈರಾಪುರ ಎಸ್.ವಿ. ಪಬ್ಲಿಕ್ ಶಾಲೆಯ ಮಕ್ಕಳು ಪ್ರಥಮ ಸ್ಥಾನ, ಗೈಡ್ಸ್ ವಿಭಾಗದಲ್ಲಿ ಮರಸು ಹೊಸಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದರು.

## ಮುರಳಿಧರ್‌ಗೆ ಪಿ.ಹೆಚ್.ಡಿ ಪದವಿ



• ಪ್ರಜೋದಯ ವರದಿ

**ಹಾಸನ:** ಕುವೆಂಪು ವಿಶ್ವವಿದ್ಯಾಲಯದಲ್ಲಿ ಕೈಗಾರಿಕ ರಾಸಾಯನ ಶಾಸ್ತ್ರ ವಿಷಯದಲ್ಲಿ ಸಿಂಥೆಸಿಸ್ ಮತ್ತು ಪಾಲಿಮರ್ ನ್ಯಾನೋ ಕಾಂಪೋಸೀಟ್‌ಗಳ ಗುಣಲಕ್ಷಣಗಳ ಅಧ್ಯಯನ : ಆಪ್ಟಿಕಲ್ ಫೋಟೋಕ್ಯಾಟಲಿಟಿಕ್ ಹಾಗೂ ಜೈವ ವೈದ್ಯಕೀಯ ಅನ್ವಯಿಕೆಗಳು ಎಂಬ ವಿಷಯದಲ್ಲಿ ಸಂಶೋಧನೆಗೆ ಐ.ಕೆ.ಮುರಳೀಧರ್ ಅವರು ಪಿ.ಹೆಚ್.ಡಿ. ಪದವಿ ಪಡೆದಿದ್ದಾರೆ.

ತಂದೆ ಕೃಷ್ಣ ನಾಯಕ್ ಎಸ್ ಮತ್ತು ತಾಯಿ ಹೂವಾಲ್ಲಿಬಾಯಿ ಮಗನಾದ ಮುರಳಿಧರ್ ಐ.ಕೆ. ಅವರು ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಸರ್ಕಾರಿ ವಿಜ್ಞಾನ ಕಾಲೇಜು ಹಾಸನದಲ್ಲಿ ಮುಗಿಸಿ ಜು.13 ರಂದು ಕುವೆಂಪು ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪದವಿಯನ್ನು ಪಡೆದಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಕೆ.ಎ.ವಿಷ್ಣುಮೂರ್ತಿ ಅವರು ಮಾರ್ಗದರ್ಶಕರಾಗಿದ್ದಾರೆ.

# ನಾಳೆ ಆರೋಗ್ಯ ಉಚಿತ ತಪಾಸಣಾ ಶಿಬಿರ

## ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡಲು ಮನವಿ

• ಪ್ರಜೋದಯ ವರದಿ



**ಸಕಲೇಶಪುರ:** ಕಾಂಗ್ರೆಸ್ ಮುಖಂಡ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಮುರಳಿ ಮೋಹನ್ ಅವರ 43ನೇ ಜನ್ಮದಿನದ ಅಂಗವಾಗಿ ಜು.22ರಂದು ಸಕಲೇಶಪುರದಲ್ಲಿ ಉಚಿತ ಮೆಗಾ ಆರೋಗ್ಯ ತಪಾಸಣಾ ಶಿಬಿರ ಮತ್ತು ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಮುರಳಿ ಮೋಹನ್ ಯುವ ಬ್ರಿಗೇಡ್ ಅಧ್ಯಕ್ಷ ಅರ್ಜುನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ ಸಹಯೋಗದಲ್ಲಿ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆಯಿಂದ ಆರೋಗ್ಯ ಶಿಬಿರ ನಡೆಯಲಿದೆ. ಸಾಮಾನ್ಯ ವೈದ್ಯರು, ಶಸ್ತ್ರಚಿಕಿತ್ಸಾ ತಜ್ಞರು, ಮೂಳೆ ತಜ್ಞರು, ಸ್ತ್ರೀರೋಗ ತಜ್ಞರು, ಮಕ್ಕಳ ತಜ್ಞರು, ಕಣ್ಣಿನ ತಜ್ಞರು, ಚರ್ಮ ರೋಗ ತಜ್ಞರು, ಕಿವಿ-ಮೂಗು -ಗಂಟಲು ತಜ್ಞರು ಹಾಗೂ ಮಾನಸಿಕ ಆರೋಗ್ಯ ತಜ್ಞರು ಸೇರಿದಂತೆ ವಿವಿಧ ವಿಭಾಗಗಳ ಪರಿಣಿತ ವೈದ್ಯರು ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಲಿದ್ದಾರೆ ಎಂದು ತಿಳಿಸಿದರು.

ಕಳೆದ ವರ್ಷವೂ ರಕ್ತದಾನ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಗಿದ್ದು, ಈ ಬಾರಿಯೂ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಂಡು ಆರೋಗ್ಯ ತಪಾಸಣೆ ಮಾಡಿಸಿ ಕೊಳ್ಳುವ ಜೊತೆಗೆ ರಕ್ತದಾನ ಮಾಡುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮಕ್ಕೆ ಆಗಮಿಸುವವರಿಗೆ ಉಪಹಾರದ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ ಎಂದರು.

ಸಮಿತಿಯ ಕಾರ್ಯದರ್ಶಿ ಪುನೀತ್ ಬೆಳಗೋಡು ಮಾತನಾಡಿ, ಮುರಳಿ ಮೋಹನ್ ಅವರ ಜನ್ಮದಿನವನ್ನು ಸಮಾಜಮುಖಿ ಕಾರ್ಯಕ್ರಮದ ಮೂಲಕ ಆಚರಿಸುವ ಉದ್ದೇಶದಿಂದ ಆರೋಗ್ಯ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಹಣಕಾಸಿನ ಕೊರತೆಯಿಂದ ಚಿಕಿತ್ಸೆ ಪಡೆಯಲು ಸಾಧ್ಯವಾಗದ ಸಾರ್ವಜನಿಕರು ಈ ಉಚಿತ ಆರೋಗ್ಯ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ರಕ್ತದಾನದಿಂದ ಅನೇಕ ಜೀವಗಳನ್ನು ಉಳಿಸಬಹುದಾಗಿದ್ದು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಕ್ತದಾನ ಮಾಡಬೇಕು. ಆಲೂರು, ಕಟ್ಟಾಯ ಹಾಗೂ ಸಕಲೇಶಪುರ ವಿಧಾನಸಭಾ ಕ್ಷೇತ್ರದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವಂತೆ ಮನವಿ ಮಾಡಿದರು.


ಯುವ ಬ್ರಿಗೇಡ್ ಪ್ರಧಾನ ಕಾರ್ಯದರ್ಶಿ ಸಂದೀಪ್ ಬೆಳಗೋಡು ಮಾತನಾಡಿ, ಮುರಳಿ ಮೋಹನ್ ಅವರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆರೋಗ್ಯ ಶಿಬಿರದ ಜೊತೆಗೆ ನಡೆಯುವ ರಕ್ತದಾನ ಶಿಬಿರದಲ್ಲಿ ಯುವಕರು ಸಕ್ರಿಯವಾಗಿ ಭಾಗವಹಿಸಿ ಸಮಾಜಮುಖಿ ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ರಂಜಿತ್ ಸೇರಿದಂತೆ ಯುವ ಬ್ರಿಗೇಡ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಸೋಮವಾರ ಹೊಳೆನರಸೀಪುರದಲ್ಲಿ ನೆರವೇರಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಅಂತ್ಯಕ್ರಿಯೆ ಸಂದರ್ಭದಲ್ಲಿ ಕಂಡು ಬಂದಂತಹ ಭಾವುಕ ಕ್ಷಣಗಳ**















## ಚನ್ನಮ್ಮ ಅವರಿಗೆ ಗೌಡರ ಕುಟುಂಬದ ವಿದಾಯ

**ಸೋಮವಾರ ಹೊಳೆನರಸೀಪುರದಲ್ಲಿ ನೆರವೇರಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಅಂತ್ಯಕ್ರಿಯೆ ವೇಳೆ ಗೌಡರ ಕುಟುಂಬ ಸದಸ್ಯರು**

## ಹುಟ್ಟೂರಲ್ಲಿ ಮಡಿಲು ತುಂಬಿ ಮುತ್ತೈದೆ ಶಾಸ್ತ್ರ

**ಹೊಳೆನರಸೀಪುರ:** ಚನ್ನಮ್ಮ ಅವರ ಪಾರ್ಥಿವ ಶರೀರವನ್ನು ಸೋಮವಾರ ಮುಂಜಾನೆ ಪಟ್ಟಣದ ಪುತ್ರ ಹೆಚ್.ಡಿ. ರೇವಣ್ಣ ಅವರ ಮನೆಗೆ ತರಲಾಯಿತು. ಇದಕ್ಕೂ ಮುನ್ನ ಚನ್ನಮ್ಮ ಅವರ ಮೃತದೇಹವನ್ನು ಹುಟ್ಟೂರು ಮುತ್ತಿಗೆ ಹಿರಿಹಳ್ಳಿಗೂ ಕೊಂಡೊಯ್ಯಲಾಯಿತು. ಈ ವೇಳೆ ಗ್ರಾಮಸ್ಥರು ಚನ್ನಮ್ಮಗೆ ಮುತ್ತೈದೆ ಮಡಿಲು ತುಂಬಿಸುವ ಶಾಸ್ತ್ರ ಮಾಡಿದರು.



ಇನ್ನು ಪಾರ್ಥಿವ ಶರೀರವನ್ನು ಮನೆಗೆ ತರುತ್ತಿದ್ದಂತೆ ಸೊಸೆ ಭವಾನಿ ರೇವಣ್ಣ ಅವರು ಆರತಿ ಬೆಳಗಿ ಮನೆಯೊಳಗೆ ಕೊಂಡೊಯ್ಯಲಾಯಿತು. ಬಳಿಕ ಕುಟುಂಬಸ್ಥರು ಪೂಜೆ ಸಲ್ಲಿಸಿ, ಸಾರ್ವಜನಿಕ ಅಂತಿಮ ದರ್ಶನಕ್ಕೆ ಅನುವು ಮಾಟ್ಟರು.

## ಮಹಿಳಾ ಕುಲಕ್ಕೆ ಮಾದರಿ ಚನ್ನಮ್ಮ ದೇವೇಗೌಡ

• ಪ್ರಜೋದಯ ವರದಿ



ಹೊಳೆನರಸೀಪುರ: ಪತಿ ಹೆಚ್.ಡಿ.ದೇವೇಗೌಡ ಅವರ ಯೋಗಕ್ಷೇಮ ನೋಡಿಕೊಳ್ಳುವುದು, ದೇವರ ಪೂಜಾ ಕೈಂಕರ್ಯ ಬಿಟ್ಟು ಬೇರೆ ಏನೂ ಗೊತ್ತಿರದ ಶ್ರೀಮತಿ ಚನ್ನಮ್ಮ ಅವರು ಮಹಿಳಾ ಕುಲಕ್ಕೆ ಮಾದರಿ ಎಂದು ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ ಅವರು ಸ್ಮರಿಸಿದರು.


ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಮೂರು ದಿನಗಳಿಂದ ರಾಜ್ಯಾದ್ಯಂತ ಚನ್ನಮ್ಮ ದೇವೇಗೌಡ ಅವರ ಗುಣಗಾಣ ನಡೆಯುತ್ತಿದೆ. ಅವರ ವ್ಯಕ್ತಿತ್ವ ಎಂತಹುದು ಎಂಬುದು ಜಗಜ್ಜಾಹೀರಾಗಿದೆ. ಯಾವುದೇ ಒಬ್ಬ ಅಧಿಕಾರಯುತ ವ್ಯಕ್ತಿಗೂ ಇಂತಹ ಗೌರವ ಸಿಗಲು ಸಾಧ್ಯವಿಲ್ಲ. ಇದು ಅವರ ಸರಳತೆ ಹಾಗು ವ್ಯಕ್ತಿತ್ವದ ಪ್ರತೀಕವಾಗಿದೆ ಎಂದರು.

ನಾನು ರಾಜಕಾರಣಕ್ಕೆ ಬಂದಾಗಿನಿಂದಲೂ ಚನ್ನಮ್ಮ ಅವರೊಂದಿಗೆ ಒಡನಾಟ ಹೊಂದಿದ್ದೆ. ನನ್ನ ತಾಯಿ ನಿಧನರಾದ ಹಿನ್ನಲೆಯಲ್ಲಿ ಅವರನ್ನೇ ತಾಯಿ ಸ್ಥಾನದಲ್ಲಿಟ್ಟು ಗೌರವಿಸುತ್ತಿದ್ದೆ. ಒಂದು ಬಾರಿ ಸಚಿವ ಸ್ಥಾನ ನೀಡುವಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಹೇಳುವಂತೆ ಚನ್ನಮ್ಮ ಅವರಲ್ಲಿ ಕೋರಿದ್ದೆ. ಆಗ ಅವರು, ನನ್ನ ಮಾತು ಗೌಡರು ಎಲ್ಲಿ ಕೇಳುತ್ತಾರೆ, ಅವರ ಸೇವೆ ಮಾಡುವುದು, ದೇವರ ಪೂಜೆ ಬಿಟ್ಟರೆ ಬೇರೇನೂ ಗೊತ್ತಿಲ್ಲ ಎಂದಿದ್ದರು.

ನಾನು ಇದೇ ತಾಲ್ಲೂಕಿನ ಹಿರೆಬೆಳಗುಲಿ ಗ್ರಾಮದವನು ಎಂದು ಗೊತ್ತಾದ ಮೇಲೆ ವಿಶೇಷ ಅಭಿಮಾನದಿಂದ ನೋಡಿಕೊಳ್ಳುತ್ತಿದ್ದರು. ಶಿಕ್ಷಕರಾಗಿದ್ದ ನಮ್ಮ ತಂದೆ ಕಾಳಯ್ಯ ಅವರು ಚನ್ನಮ್ಮ ಅವರಿಗೆ ಪಾಠ ಮಾಡಿದ್ದರು. ಮತ್ತೊಬ್ಬ ಶಿಕ್ಷಕ ರಾಚಂದ್ರಯ್ಯ ಅವರ ಕುರಿತು ಆಗಾಗ ನನ್ನ ಬಳಿ ಹೇಳುತ್ತಿದ್ದರು. ಅಂತ್ಯಂತ ಸರಳ ಸ್ವಭಾವದ ಧೀಮಂತ ಮಹಿಳೆ ಅವರಾಗಿದ್ದರೆಂದರು.

ಶ್ರೀಮತಿ ಚನ್ನಮ್ಮ ಅವರ ಆಶೀರ್ವಾದದಿಂದ ನನ್ನನ್ನು ಸೇರಿ ಅನೇಕರು ರಾಜಕಾರಣದಲ್ಲಿ ಸ್ಥಾನಮಾನ ಗಳಿಸಿದ್ದೇವೆ. ಎಲ್ಲೇ ಇದ್ದರೂ ಅವರು ನಮ್ಮನ್ನು ಹರಸುತ್ತಾರೆಂದರು.

## ಚನ್ನಮ್ಮ ಅವರ ಆಶೀರ್ವಾದ ನಮ್ಮ ಮೇಲಿರುತ್ತೆ



• ಪ್ರಜೋದಯ ವರದಿ

**ಹೊಳೆನರಸೀಪುರ:** ಶ್ರೀಮತಿ ಚನ್ನಮ್ಮ ಅವರ ಆಶೀರ್ವಾದದಿಂದ ನಾವು ಈ ಮಟ್ಟಕ್ಕೆ ಬೆಳೆದಿದ್ದೇವೆ. ಅವರ ಆಶೀರ್ವಾದ ನಮ್ಮ ಮೇಲೆ ಯಾವಾಗಲೂ ಇರುತ್ತದೆಂದು ಶಾಸಕ ಎ.ಮಂಜು ಅವರು ಭಾವುಕರಾದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೂಡು ಕುಟುಂಬದಂತೆ ನಾವೆಲ್ಲರೂ ಇದ್ದೆವು. ರಾಜ್ಯದಲ್ಲಿ ಜೆಡಿಎಸ್ ಈ ಮಟ್ಟಕ್ಕೆ ಬೆಳೆಯಲು ಅವರೇ ಕಾರಣ. ಯಾರೇ ಮನೆಗೆ ಹೋದರೂ ಊಟ, ಉಪಾಹಾರ ಕೊಟ್ಟು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಸಾಕ್ಷಾತ್ ಅನ್ನಪೂರ್ಣೆಯಾಗಿದ್ದ ಚನ್ನಮ್ಮ ಅವರು ಎಲ್ಲೇ ಇದ್ದರೂ ನಮ್ಮೆಲ್ಲರನ್ನು ಹರಸುತ್ತಾರೆ. ಅವರ ಅಗಲಿಕೆ ಹೆತ್ತ ತಾಯಿಯನ್ನು ಕಳೆದುಕೊಂಡಂತಾಗಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರಿಗೆ ಬೆನ್ನೆಲುಬಾಗಿದ್ದ ಚನ್ನಮ್ಮ ಅವರು ರಾಜಕೀಯದ ಪ್ರತಿ ಹಂತದಲ್ಲೂ ಜೊತೆಗಿದ್ದರೆಂದರು.

ದೇವೇಗೌಡರು ರಾಜಕೀಯದಲ್ಲಿ ಉನ್ನತ ಸ್ಥಾನಕ್ಕೆ ಏರಬೇಕೆಂಬುದು ಚನ್ನಮ್ಮ ಅವರ ಆಶಯವಾಗಿತ್ತು. ರಾಜ್ಯದಲ್ಲಿ ಹಲವಾರು ಜನರು ಮುಖ್ಯಮಂತ್ರಿ, ಸಚಿವರು ಹಾಗು ಶಾಸಕರಾಗಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬ ಕಾರಣ. ರಾಜಕಾರಣದ ತರಬೇತಿ ಕೇಂದ್ರವಾಗಿ ದೇವೇಗೌಡರ ಮನೆ ಕಾರ್ಯನಿರ್ವಹಿಸಿದೆ. ನಾನು ಶಾಸಕನಾಗಿ ಆಯ್ಕೆಯಾಗಲು ಆ ಕುಟುಂಬ ಕಾರಣ. ಅಲ್ಲಿಂದಲೇ ಹಾಸನ ಹಾಗು ರಾಜ್ಯದಲ್ಲಿ ಅನೇಕರು ಜನಪ್ರತಿನಿಧಿಗಳಾಗಿ ಹೊರ ಹೊಮ್ಮಿದ್ದಾರೆ. ಯಾರೂ ಕೂಡ ಈ ಕುಟುಂಬದ ಋಣ ಮರೆಯಬಾರದೆಂದರು.

### ನೀಟ್ ಹಾಗು ಜೆಇಇ ಸೇರಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಡೆದಿರುವ ಅಕ್ರಮ

## ಕೇಂದ್ರ ಶಿಕ್ಷಣ ಸಚಿವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ನೀಟ್ ಹಾಗು ಜೆಇಇ ಸೇರಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಡೆದಿರುವ ಅಕ್ರಮಗಳ ನೈತಿಕ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಸೋಮವಾರ ಜಿಲ್ಲಾ ಜನಪರ ಚಳುವಳಿ ಒಕ್ಕೂಟದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.



ನಗರದ ಹೇಮಾವತಿ ಪ್ರತಿಮೆ ಮುಂಭಾಗದಿಂದ ಪ್ರತಿಭಟನಾ ಮೆರವಣಿಗೆ ಆರಂಭವಾಗಿ ಎನ್.ಆರ್. ವೃತ್ತ ಹಾಗು ಬಿ.ಎಂ. ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ಬಂದ ಪ್ರತಿಭಟನಗಾರರು ನೀಟ್ ಅಕ್ರಮದ ವಿರುದ್ಧ ಆಮ ರಣಾಂತ ಉಪವಾಸ ಕುಳಿತಿರುವ ಸೋನಂ ವಾಂಗ್ಚುಕ್ ಅವರಿಗೆ ಬೆಂಬಲ ವ್ಯಕ್ತಪಡಿಸಿದರು.

ದೇಶದ ಲಕ್ಷಾಂತರ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ಇಂಜಿನೀಯರಿಂಗ್ ಶಿಕ್ಷಣದ ಕನಸನ್ನು ನನಸಾಗಿಸಿಕೊಳ್ಳಲು ಹಗಲಿರುಳು ಶ್ರಮಿಸಿ ನೀಟ್ ಹಾಗು ಜೆಇಇ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಾರೆ. ಆದರೆ, ಪ್ರಶ್ನೆಪತ್ರಿಕೆ ಸೋರಿಕೆ ಹಾಗು ಪರೀಕ್ಷಾ ಅಕ್ರಮಗಳು ಅವರ ಪರಿಶ್ರಮಕ್ಕೆ ಧಕ್ಕೆ ತಂದು, ಶಿಕ್ಷಣ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕುಗ್ಗಿಸಿವೆ. ಪರೀಕ್ಷಾ ಅಕ್ರಮಗಳಿಗೆ ಸಂಬಂಧಿಸಿದ ನೈತಿಕ ಹೊಣೆಗಾರಿಕೆಯನ್ನು ಕೇಂದ್ರ ಸರ್ಕಾರ ಮತ್ತು ಶಿಕ್ಷಣ ಸಚಿವರು ಹೊತ್ತುಕೊಳ್ಳಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ದೇಶದ ಶಿಕ್ಷಣ ವ್ಯವಸ್ಥೆಯ ವಿಶ್ವಾಸಾರ್ಹತೆ ಕಾಪಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಹಿನ್ನಲೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂಬುದು ವಿದ್ಯಾರ್ಥಿ ಸಮುದಾಯದ ಪ್ರಮುಖ ಬೇಡಿಕೆಯಾಗಿದೆ. ಇದೇ ಬೇಡಿಕೆ ಯನ್ನು ಮುಂದಿಟ್ಟು ಶಿಕ್ಷಣ ಪ್ರೇಮಿ ಸೋನಂ ವಾಂಗ್ಚುಕ್ ದೆಹಲಿಯ ಜಂತರ್-ಮಂತರ್‌ನಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಚಿತ್ರಕಲಾವಿದ ಬಿ.ಎಸ್. ದೇಸಾಯಿ, ಮಾದಿಗ ದಂಡೋರ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಆರ್. ವಿಜಯಕುಮಾರ್, ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಧರ್ಮೇಶ್, ಕಾರ್ಯದರ್ಶಿ ಎಂ.ಜಿ. ಪೃಥ್ವಿ, ಎಂ.ಸಿ. ಡೋಂಗ್ರೆ ಇತರರಿದ್ದರು.

## ನವೋದಯ ವಿದ್ಯಾ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಇಲ್ಲಿನ ನವೋದಯ ವಿದ್ಯಾಸಂಘದ ಕಾರ್ಯದರ್ಶಿಯಾಗಿ ಜಲೇಂದ್ರಕುಮಾರ್ ಮತ್ತು ಖಜಾಂಚಿಯಾಗಿ ಮರುವನಹಳ್ಳಿ ಸಂತೋಷ್ ಅವರು ಅವಿರೋಧವಾಗಿ ಆಯ್ಕೆಯಾದರು.

ನವೋದಯ ವಿದ್ಯಾ ಸಂಘವು 13 ನಿರ್ದೇಶಕರನ್ನು ಹೊಂದಿದೆ. ಒಪ್ಪಂದದಂತೆ ಈ ಹಿಂದೆ ಕಾರ್ಯದರ್ಶಿಯಾಗಿದ್ದ ಶರತ್ ಕೆಂಬಾಳು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ ಹಿನ್ನಲೆಯಲ್ಲಿ ವಕೀಲ ಜಲೇಂದ್ರ ಕುಮಾರ್ ಅವರನ್ನು ಎಲ್ಲಾ ನಿರ್ದೇಶಕರು ಒಮ್ಮತದಿಂದ ಕಾರ್ಯದರ್ಶಿಯಾಗಿ ಮತ್ತು ಸಹ ಕಾರ್ಯದರ್ಶಿಯಾಗಿದ್ದ ಮರುವನಹಳ್ಳಿ ಸಂತೋಷ್ ಅವರನ್ನು ಖಜಾಂಚಿಯಾಗಿ ಆಯ್ಕೆ ಮಾಡಲಾಗಿತ್ತು.

ನೂತನ ಕಾರ್ಯದರ್ಶಿ ಮತ್ತು ಖಜಾಂಚಿಯವರು ನವೋದಯ ವಿದ್ಯಾಸಂಘದ ಆಡಳಿತ ಕಚೇರಿಯಲ್ಲಿ ಅಧಿಕಾರ ಸ್ವೀಕಾರ ಮಾಡಿದರು.

ವಿದ್ಯಾ ಸಂಘದ ಅಧ್ಯಕ್ಷ ಸಿ.ಜೆ. ಮಂಜುನಾಥ್ ಅವರು ಮಾತನಾಡಿ, ನನ್ನ ಸಹಪಾಠಿಯಾದ ಶರತ್ ಕೆಂಬಾಳು ಅವರು ಕಾರ್ಯದರ್ಶಿಯಾಗಿ ಉತ್ತಮ ಕೆಲಸ ಮಾಡಿದ್ದು, ಆಂತರಿಕ ಒಪ್ಪಂದದಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಜಲೇಂದ್ರ ಕುಮಾರ್ ಅವರಿಗೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಎಲ್ಲರ ಸಹಕಾರ ದಿಂದ ಸಂಘದ ಅಭಿವೃದ್ಧಿಗೆ ಜಲೇಂದ್ರ ಕುಮಾರ್ ಮತ್ತು ಸಂತೋಷ್ ಅವರು ಶ್ರಮಿಸಲಿ ಎಂದು ಆಶಿಸಿದರು.

ಶರತ್ ಕೆಂಬಾಳು ಅವರು ಮಾತನಾಡಿ, 13 ನಿರ್ದೇಶಕರ ಸಹಕಾರ ಮತ್ತು ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಹಕಾರದಿಂದ 23 ತಿಂಗಳು ಉತ್ತಮ ಕೆಲಸ ಮಾಡಿದ ತೃಪ್ತಿ ಇದೆ. ಎಲ್ಲರ ಶ್ರಮದಿಂದ ಕಳೆದ ಸಾಲಿನಲ್ಲಿ ವಿದ್ಯಾಸಂಸ್ಥೆ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದಾಖಲಿಸಿದೆ. ಆದೇ ರೀತಿ ಉತ್ತಮ ದಾಖಲಾತಿಯೂ ಆಗಿದೆ. ಇದು ಇದೇ ರೀತಿ ಮುಂದುವರೆಯಲ್ಲೂ ತಮ್ಮ ಸಹಕಾರ ಎಂದೆಂದೂ ಇರುವುದಾಗಿ ಹೇಳಿದರು.



## ಅತಿಥಿ ಸತ್ಕಾರಕ್ಕೆ ಖ್ಯಾತರಾಗಿದ್ದ ಚನ್ನಮ್ಮ: ಭೋಜೇಗೌಡ

**ಹೊಳೆನರಸೀಪುರ:** ಧಾರ್ಮಿಕತೆ, ಅತಿಥಿ ಸತ್ಕಾರಕ್ಕೆ ಶ್ರೀಮತಿ ಚನ್ನಮ್ಮ ಹೆಸರಾಗಿದ್ದರೆಂದು ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ಅವರು ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಸ್ಕಾರ, ದೈವಭಕ್ತಿ, ಅತಿಥಿಗಳ ಉಪಚಾರ ಚನ್ನಮ್ಮ ಅವರ ದೈನದಿಂದ ಕೆಲಸವಾಗಿತ್ತು. ಮನೆಗೆ ಯಾರೇ ಬಂದರೂ ಪ್ರೀತಿ-ವಿಶ್ವಾಸದಿಂದ ಕಾಣುತ್ತಿದ್ದರು. ಅಪಾರ ದೈವ ಭಕ್ತೆಯಾಗಿದ್ದ ಅವರು ಯಾವಾಗಲೂ ಪೂಜೆ ಪುನಸ್ಕಾರಗಳಲ್ಲೇ ತೊಡಗಿರುತ್ತಿದ್ದರು ಎಂದರು.

ಅವರ ಧಾರ್ಮಿಕ ಭಾವನೆಗೆ ಧಕ್ಕೆಯಾಗಬಾರದೆಂಬ ಕಾರಣಕ್ಕೆ ಬೆಂಗಳೂರಿನ ರಾಜರಾಜೇಶ್ವರಿ ದೇವಾಲಯದ ಅರ್ಚಕರು ಅಂತಿಮ ಪೂಜಾ ವಿಧಿ ವಿಧಾನ ನೆರವೇರಿಸಿದ್ದಾರೆ. ಅನ್ನಪೂರ್ಣೇಶ್ವರಿ ಅವರನ್ನು ಕಳೆದುಕೊಂಡು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಕುಟುಂಬ ಮಾತ್ರವಲ್ಲದೆ ಬಂಧು ಬಳಗ, ಪಕ್ಷದ ಅಭಿಮಾನಿಗಳು ಬಡವಾಗಿದ್ದಾರೆ. ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಭಗವಂತ ಎಲ್ಲರಿಗೂ ಕರುಣಿಸಲಿ ಎಂದು ಪ್ರಾರ್ಥಿಸಿದರು.



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಅವರ ಪಾರ್ಥಿವ ಶರೀರ ಶ್ರದ್ಧಾಂಜಲಿ ವಾಹನ ಹಾಸನ ನಗರ ತಲುಪುವುದು ಭಾನುವಾರ ಮಧ್ಯರಾತ್ರಿ 2 ಗಂಟೆ ದಾಟಿತ್ತು. ಚನ್ನಮ್ಮ ಅವರ ಅಭಿಮಾನಿಗಳು, ಸಾರ್ವಜನಿಕರು ಕಾದು ನಿಂತಿದ್ದರು. ಈ ವೇಳೆ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಅವರು ಕುಟುಂಬ ಸಮೇತರಾಗಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ಚನ್ನಮ್ಮ ಅವರು ನಮ್ಮ ತಾಯಿಯಂತೆ, ನಮ್ಮ ತಂದೆ ಹಾಗೂ ಕುಟುಂಬವನ್ನು ಪೋಷಿಸಿದ್ದಾರೆ. ಅವರ ಕೊಡುಗೆ ನಮ್ಮ ಕುಟುಂಬಕ್ಕೆ ಅಪಾರವಾಗಿದೆ. ಅವರನ್ನು ಕಳೆದುಕೊಂಡಿರುವುದು ಬೇಸರವಾಗಿದೆ ಎಂದು ಭಾವುಕರಾದರು.

## ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿ ಶವ ಪತ್ತೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹುಳಿಗೆರೆ ಗ್ರಾಮದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿಯೊಬ್ಬರ ಶವ ಪತ್ತೆಯಾಗಿದ್ದು, ಗಂಡನ ಮನೆಯ ವರೇ ಕೊಲೆ ಮಾಡಿದ್ದಾರೆಂದು ಆಕೆಯ ಕುಟುಂಬಸ್ಥರು ಆರೋಪಿಸಿದ್ದಾರೆ.

ಗ್ರಾಮದ ಶೋಭಾ (27) ಮೃತರು. ವಿಜಯಕುಮಾರ್ ಎಂಬಾ ತನೊಂದಿಗೆ ಒಂಬತ್ತು ವರ್ಷಗಳ ಹಿಂದೆ ವಿವಾಹವಾಗಿದ್ದರು. ಆರಂಭ ದಲ್ಲಿ ಚೆನ್ನಾಗಿಯೇ ಇದ್ದ ದಾಂಪತ್ಯ ಜೀವನದಲ್ಲಿ ಕಳೆದ ನಾಲ್ಕು ವರ್ಷ ಗಳಿಂದ ಬಿರುಕು ಮೂಡಿತ್ತು. ಈ ಸಂಬಂಧ ಹಲವು ಬಾರಿ ರಾಜಿ ಪಂಚಾಯಿತಿ ಮಾಡಲಾಗಿತ್ತು. ಇತ್ತೀಚೆಗೆ ಪತಿ ವಿಜಯ್ ಕುಮಾರ್, ಅತ್ತೆ ಗಂಗ್ಯಮ್ಮ, ಮಾವ ನಂಜುಂಡೇ ಗೌಡ, ಹೆಣ್ಣು ಮಕ್ಕಳಾದ ಅನಿತ ಮತ್ತು ವಿನುತ ಅವರು ಕ್ಷುಲ್ಲಕ ಕಾರಣಕ್ಕೆ ಶೋಭಾ ಅವರೊಂದಿಗೆ ಜಗಳ ಮಾಡಿ ದೈಹಿಕ ಹಾಗು ಮಾನಸಿಕ ಹಿಂಸೆ ನೀಡುತ್ತಿದ್ದರು ಎನ್ನಲಾಗಿದೆ.

ಜು.17 ರಂದು ತವರು ಮನೆ ಯವರಿಗೆ ಕರೆ ಮಾಡಿದ್ದ ಶೋಭಾ ಗಂಡನ ಮನೆಯಲ್ಲಿ ತನಗಾಗುತ್ತಿರುವ ಅನ್ಯಾಯದ ಕುರಿತು ತಿಳಿಸಿದ್ದರು. ಆದರೆ ಆ ದಿನವೇ ವಿಜಯಕುಮಾರ್ ಪತ್ನಿಯನ್ನು ಆಸ್ಪತ್ರೆಗೆ ಸೇರಿಸಿದ್ದಾಗಿ ತಿಳಿಸಿದ್ದ. ಆಸ್ಪತ್ರೆಗೆ ಬರುಷ್ಟರಲ್ಲಿ ಶೋಭಾ ಮೃತಪಟ್ಟಿದ್ದರು.

ಆಕೆಯ ದೇಹದ ಮೇಲೆ ಗಾಯದ ಗುರುತುಗಳಿದ್ದು, ಕೊಲೆ ಮಾಡಿರುವ ಶಂಕೆ ಇದೆ.

## ಗಣಿ ಇಲಾಖೆಯ 160 ಅಧಿಕಾರಿಗಳ ವರ್ಗಾವಣೆ

• ಪ್ರಜೋದಯ ವರದಿ

**ಬೆಂಗಳೂರು:** ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಹಲವು ವರ್ಷಗಳಿಂದ ಒಂದೇ ಸ್ಥಳದಲ್ಲಿ, ಅದರಲ್ಲೂ ಸ್ವಂತ ಅಥವಾ ನೆರೆ ಜಿಲ್ಲೆಗಳಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳ ವರ್ಗಾವಣೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆದೇಶಿಸಿದ್ದಾರೆ.

# ಸಿಜೆಪಿ ಪ್ರತಿಭಟನೆ: ಪೊಲೀಸರು ಲಾಠಿಚಾರ್ಜ್, ಉದ್ವಿಗ್ನತೆ

### ಸಂಸತ್ತಿಗೆ ಮುತ್ತಿಗೆ ಹಾಕಲು ಯತ್ನ: ಪ್ರತಿಭಟನಾಕಾರರ ಮೇಲೆ ಅಶ್ರುವಾಯು ಪ್ರಯೋಗ

• ಪ್ರಜೋದಯ ವರದಿ

**ನವದೆಹಲಿ:** ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ ನಡೆಸುತ್ತಿರುವ ಸಂಸತ್ ಚಲೋ ಪ್ರತಿಭಟನಾ ರ‍್ಯಾಲಿ ವೇಳೆ ಭಾರೀ ಉದ್ವಿಗ್ನತೆ ಉಂಟಾಗಿದ್ದು, ಪೊಲೀಸರು ಲಾಠಿಚಾರ್ಜ್ ಮಾಡಿದ್ದಾರೆ. ಅಲ್ಲದೇ ಪ್ರತಿಭಟನಾಕಾರರನ್ನು ಚದುರಿಸಲು ಅಶ್ರುವಾಯು ಸಿಡಿಸಿದ್ದಾರೆ.



ಸಂಸತ್ತಿನ ಮಳೆಗಾಲದ ಅಧಿವೇಶನದ ಸಮಯದಲ್ಲಿ ಭಾರೀ ಭದ್ರತೆಯ ನಡುವೆಯೂ ಪ್ರತಿಭಟನಾಕಾರರು ಸಂಸತ್ ಚಲೋ ರ‍್ಯಾಲಿ ನಡೆಸಿದ್ದರು. ಬ್ಯಾರಿಕೇಡ್‌ಗಳನ್ನು ದಾಟಿ ಸಂಸತ್ತಿನ ಕಡೆಗೆ ನುಗ್ಗಲು ಪ್ರತಿಭಟನಾಕಾರರು ಯತ್ನಿಸಿದ್ದರು. ಈ ವೇಳೆ ಪೊಲೀಸರು ಹಲವಾರು ಪ್ರತಿಭಟನಾಕಾರರನ್ನು ಬಂಧಿಸಿದ್ದಾರೆ. ಸಂಸತ್ತಿನ ಅಧಿವೇಶನ ಆರಂಭವಾಗುತ್ತಿರುವುದರಿಂದ ದೆಹಲಿ ನಗರದಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಸೆಕ್ಷನ್ 163 (ಹಳೆಯ 144ನೇ ವಿಧಿ) ಅಡಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಈ ಮೆರವಣಿಗೆಗೆ ಯಾವುದೇ ಅಧಿಕೃತ ಅನುಮತಿ ನೀಡಿರಲಿಲ್ಲ ಮತ್ತು ಕಾನೂನು ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಮುಂಚಿತವಾಗಿಯೇ ಎಚ್ಚರಿಸಿದ್ದರು.

**ಪೊಲೀಸರಿಗೆ ಹೈಕೋರ್ಟ್ ತರಾಟೆ:**

ಜಂತರ್ ಮಂತರ್‌ನಲ್ಲಿ ನಡೆಯುತ್ತಿರುವ ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ) ನೇತೃತ್ವದ ಪ್ರತಿಭಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಪ್ರತಿಭಟನೆಯಲ್ಲಿ ಭಾಗವಹಿಸಿರುವವರ ಮೇಲೆ ನಿರಂತರ ನಿಗಾ ಇರಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್, ಸುಪ್ರೀಂ ಕೋರ್ಟ್ ನೀಡಿರುವ ಕಣ್ಗಾವಲು ಮಾರ್ಗಸೂಚಿಗಳನ್ನು ದೆಹಲಿ ಪೊಲೀಸರು ಪಾಲಿಸಿದ್ದಾರೆಯೇ ಎಂದು ಪ್ರಶ್ನಿಸಿದೆ.

ಸೋಮವಾರ ನಡೆದ ವಿಚಾರಣೆಯಲ್ಲಿ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ತೇಜಸ್ ಕಾರಿಯಾ ಅವರಿದ್ದ ವಿಭಾಗೀಯ ಪೀಠ, ದೆಹಲಿ ಪೊಲೀಸರ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಉದ್ದೇಶಿಸಿ, ಸುಪ್ರೀಂ ಕೋರ್ಟ್‌ನ ಕಣ್ಗಾವಲು ಕುರಿತ ನಿರ್ದೇಶನಗಳನ್ನು ನೋಡಿದ್ದೀರಾ ದೆಹಲಿ ಪೊಲೀಸರು ಆ ಮಾರ್ಗ ಸೂಚಿಗಳನ್ನು ಪಾಲಿಸಿದ್ದಾರೆಯೇ ಎಂದು ಪ್ರಶ್ನಿಸಿತು.

ಇದಕ್ಕೆ ಉತ್ತರಿಸಿದ ತುಷಾರ್ ಮೆಹ್ತಾ, ಇಲ್ಲಿ ಯಾವುದೇ ರೀತಿಯ ಕಣ್ಗಾವಲು ನಡೆದಿಲ್ಲ. ಜಂತರ್ ಮಂತರ್‌ನಲ್ಲಿ ನಡೆಯುವ ಪ್ರತಿಯೊಂದು ಪ್ರತಿಭಟನೆಯೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ವಿಡಿಯೊದಲ್ಲಿ ದಾಖಲಿಸಲಾಗುತ್ತದೆ. ಈ ಪ್ರತಿ ಭಟನೆಯಲ್ಲಿಯೂ ನೂರಾರು ಜನರು ಸ್ವತಃ ವಿಡಿಯೊ ಮತ್ತು ರೀಲ್ಸ್ ಮಾಡುತ್ತಿದ್ದಾರೆ. ಇದನ್ನು ಕಣ್ಗಾವಲು ಎಂದು ಕರೆಯಲು ಸಾಧ್ಯವಿಲ್ಲ ಎಂದು ವಾದಿಸಿದರು.

ಎರಡೂ ಪಕ್ಷಗಳ ವಾದ ಆಲಿಸಿದ ಹೈಕೋರ್ಟ್, ಪ್ರಕರಣದ ಮುಂದಿನ ವಿಚಾರಣೆಯನ್ನು ಮಂಗಳವಾರಕ್ಕೆ ಮುಂದೂಡಿದ್ದು, ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಳ್ಳುತ್ತೇವೆ. ಸಿದ್ಧರಾಗಿ ಬನ್ನಿ ಎಂದು ಸೂಚಿಸಿದೆ.

### ಪೊಲೀಸರ ಮೇಲೆ ಕಲ್ಲುತೂರಾಟ

ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಪ್ರತಿಭಟನೆ ವೇಳೆ ಜಂತರ್ ಮಂತರ್‌ನಲ್ಲಿ ಪೊಲೀಸರ ಮೇಲೆ ಪ್ರತಿಭಟನಾಕಾರರಿಂದ ಕಲ್ಲುತೂರಾಟ ನಡೆದಿದೆ. ಹಲವು ಪೊಲೀಸರಿಗೆ ಗಾಯವಾಗಿದ್ದು, ಆ್ಯಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಬಳಕ ಸಂಸತ್ ಭವನದ ಬಳಿ ಪೊಲೀಸ್ ಬಂದೋಬಸ್ತ್ ಹೆಚ್ಚಿಸಲಾಗಿದೆ. ಮುನ್ನೆಚ್ಚರಿಕೆಯಾಗಿ ಹೆಚ್ಚುವರಿ ಪೊಲೀಸರ ನಿಯೋಜನೆ ಮಾಡಲಾಗಿದೆ.

## ಮಾನದಂಡಗಳ ಅನ್ವಯವೇ ಶಾಶ್ವತ ನಿವಾಸ ಪ್ರಮಾಣಪತ್ರ

• ಪ್ರಜೋದಯ ವರದಿ

**ಬೆಂಗಳೂರು:** ಕೇಂದ್ರ ಸರ್ಕಾರ ಎಸ್‌ಐಆರ್ ಮಾಡಲು ಪ್ರಾರಂಭಿಸಿದ್ದು 11 ಮಾನದಂಡಗಳ ಪ್ರಕಾರವೇ ಶಾಶ್ವತ ನಿವಾಸಿ ಪ್ರಮಾಣಪತ್ರ (ಪಿಆರ್‌ಸಿ) ನೀಡಲು ತೀರ್ಮಾನಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಪರಮೇಶ್ವರ್ ಅವರು ತಿಳಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ರಾಜ್ಯದಲ್ಲಿ ಮನೆ ಮನೆಗೆ ತೆರಳಿ ಉಚಿತ ಜಾತಿ ಪ್ರಮಾಣ ಪತ್ರ ವಿತರಣೆ ಹಾಗೂ ಶಾಶ್ವತ ನಿವಾಸ ಪ್ರಮಾಣಪತ್ರ ವಿತರಿಸುವ ಸೇವೆಯ ಆರಂಭಟಟಿಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚಾಲನೆ ನೀಡಿ ಮಾತನಾಡಿದರು. ಈ ವೇಳೆ, ಶಾಶ್ವತ ನಿವಾಸಿಗಳ ಪ್ರಮಾಣ ಪತ್ರವನ್ನು ಮನೆಮನೆಗೆ ತಲುಪಿಸುವ ಮೂಲಕ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ನೇತೃತ್ವದ ನಮ್ಮ ಸರ್ಕಾರವು ಜನರ ಸೇವೆ ಮಾಡಲು ಮತ್ತೊಂದು ಹೆಜ್ಜೆಯನ್ನಟ್ಟಿದೆ ಎಂದು ಹೇಳಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019